# ಮಾನಸ ಗಂಗೋತ್ರಿ

ಸಂವಹನ ಮತ್ತು ಪತ್ರಿಕೋದ್ಯಮ ವಿದ್ಯಾರ್ಥಿಗಳ ಪ್ರಾಯೋಗಿಕ ಪತ್ರಿಕೆ

ಸಂಪುಟ : ೪೧ ಸಂಚಿಕೆ : ೧೧ ಮೈಸೂರು ಸೆಪ್ಟೆಂಬರ್ ೩೦ ೨೦೧೧ ಕೆ.ಆರ್.ಎನ್.ಎನ್.೨೨೪೫೦/೭೧



**ಪುಟ 2ರಲ್ಲಿ**

ಇತಿಹಾಸ ಸಾರುತ್ತಿರುವ ಅಂಬಾವಿಲಾಸ ಅರಮನೆ



**ಪುಟ 3ರಲ್ಲಿ**

ಗ್ರಾಮೀಣ ಸ್ಯಾಕ್ಸೋಫೋನ್ ಕಲಾವಿದ



**ಪುಟ 4ರಲ್ಲಿ**

ಗ್ರಾಮೀಣ ಸೊಗಡಿನ ಕನ್ನಡಿ ಹಿಡಿದ ಗರಡಿ ಕಲೆ

# ದಸರಾ ಯುವ ಸಂಭ್ರಮಕ್ಕೆ ಅದ್ದೂರಿ ಚಾಲನೆ

ಮೈಸೂರು :

ಸೆ.೨೧ ಮಾನಸಗಂಗೋತ್ರಿ ಬಯಲು ರಂಗಮಂದಿರದಲ್ಲಿ ಬುಧವಾರ ವೈದ್ಯಕೀಯ ಶಿಕ್ಷಣ ಸಚಿವರಾದ ರಾಮದಾಸ್‌ರವರು ಯುವ ಸಂಭ್ರಮ ದಸರಾವನ್ನು ದೀಪ ಬೆಳಗಿ, ನಗಾರಿ ಬಾರಿಸುವುದರ ಮೂಲಕ ಉದ್ಘಾಟಿಸಿದರು.

ದಸರಾ ಪ್ರಯುಕ್ತ ಆಯೋಜಿಸಲಾಗಿದ್ದ ಯುವ ದಸರಾವನ್ನು ಉದ್ಘಾಟಿಸಿ ಮಾತನಾಡಿದ ರಾಮದಾಸ್ ರವರು ಸುಮಾರು ೧೦೦ ಕಾಲೇಜುಗಳಿಂದ ವಿದ್ಯಾರ್ಥಿಗಳು ಈ ಯುವ ದಸರಾದಲ್ಲಿ ಭಾಗವಹಿಸಲಿದ್ದು. ಇಲ್ಲಿ ಆಯ್ಕೆಯಾದ ೫ ವಿದ್ಯಾರ್ಥಿಗಳ ನೃತ್ಯ ತಂಡಗಳನ್ನು ಮನರಂಜನಾ ದಸರಾದಲ್ಲಿ ಪಾಲ್ಗೋಳಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ತಿಳಿಸಿದರು.

ವಿಶ್ವ ಸ್ಪರ್ಧಾತ್ಮಕ ಯುಗವಾಗಿದ್ದು ಸ್ಪರ್ಧೆಗಳನ್ನು ಎದುರಿಸಲು ಎಲ್ಲರು ಸಜ್ಜಾಗಬೇಕಿದೆ. ಸ್ಪರ್ಧೆಗಳ ಮೂಲಕ ಸ್ನೇಹ ಮನೋಭಾವ ಬೆಳೆಸಿಕೊಳ್ಳಿ ಎಂದು ವಿದ್ಯಾರ್ಥಿಗಳಿಗೆ ಕಿವಿಮಾತು ಹೇಳಿದರು.

೩೭ ಗ್ರಾಮ ಪಂಚಾಯ್ತಿಗಳಲ್ಲಿ ಗ್ರಾಮೀಣ ದಸರೆಗೆ ಚಾಲನೆ ನೀಡಿದ್ದು, ಮೈಸೂರಿನ ೬೫ ವಾರ್ಡ್‌ಗಳಲ್ಲೂ ಮನೆ ಮನೆ ದಸರಾ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ ಎಂದು ತಿಳಿಸಿದರು.

ಚಿತ್ರನಟಿ ರೂಪಿಕ ಮಾತನಾಡಿ ಯುವ ದಸರಾದ ಅವಕಾಶಗಳನ್ನು ಬಳಸಿಕೊಳ್ಳಿ, ಇಂದಿನ ಯುವ ಸಮೂಹಕ್ಕೆ ಇಂತಹ ಕಾರ್ಯಕ್ರಮಗಳು ಪ್ರೋತ್ಸಾಹ ನೀಡುತ್ತವೆ, ಈ ಯುವ ದಸರಾದಲ್ಲಿ ಪಾಲ್ಗೊಳ್ಳುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಎಂದು ನುಡಿದರು.

ನಂತರ ಮಾತನಾಡಿದ ಮೈಸೂರು ವಿ.ವಿಯ ಪರೀಕ್ಷಾಂಗ ಕುಲಸಚಿವರಾದ ರಾಮುರವರು ಸರ್ಕಾರ ಈ ಯುವ ದಸರಾ ಮತ್ತು ಯುವ ಸಂಭ್ರಮಕ್ಕೆ ೧೦ ಕೋಟಿ ನೀಡಿದೆ. ಯುವ ದಸರಾದಲ್ಲಿ ಉದ್ಯಮಿಗಳು ಪಾಲ್ಗೋಳ್ಳಲು ಉತ್ಸಕವಾಗಿದ್ದು ಯುವ ದಸರಾ ಪ್ರಯೋಜಕತ್ವವನ್ನು ಟಿ.ವಿ.ಎಸ್ ಸಮೂಹ ವಹಿಸಿ ಕೊಂಡಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು

**ಅವಿನಾಶ್ ಜೈನಹಳ್ಳಿ**



ದಸರಾ ಯುವ ಸಂಭ್ರಮಕ್ಕೆ ನಗಾರಿ ಬಾರಿಸುವ ಮೂಲಕ ವಿಧ್ಯುಕ್ತ ಚಾಲನೆ ನೀಡುತ್ತಿರುವುದು. ಚಿತ್ರದಲ್ಲಿ ಸಚಿವ ಎಸ್.ಎ. ರಾಮ್‌ದಾಸ್, ನಟಿ ರೂಪಿಕಾ, ಮೇಯರ್ ಪುಷ್ಪಲತಾ, ಚಿಕ್ಕಣ್ಣ, ಜಿ.ಟಿ ದೇವೆಗೌಡರನ್ನು ಕಾಣಬಹುದು.

## ಸಂಕ್ಷಿಪ್ತ ಸುದ್ದಿ

### ಏಕದಿನ ಪಂದ್ಯಕ್ಕೆ ದ್ರಾವಿಡ್ ವಿದಾಯ

ಮೈಸೂರು :

ಭಾರತ ಕ್ರಿಕೆಟ್ ತಂಡದ ವಾಲ್ ಎಂದೇ ಖ್ಯಾತಿ ಪಡೆದ ರಾಹುಲ್ ಡ್ರಾವಿಡ್ ಏಕದಿನ ಕ್ರಿಕೆಟ್‌ಗೆ ವಿದಾಯ ಹೇಳಿದ್ದಾರೆ.

ಸೋಫಿಯಾ ಗಾರ್ಡನ್‌ನಲ್ಲಿ ರೋಚಕ ಕೊನೆಯ ಏಕದಿನ ಪಂದ್ಯವನ್ನಾಡಿ ಏಕದಿನ ಪಂದ್ಯಕ್ಕೆ ವಿದಾಯ ಹೇಳಿದ್ದಾರೆ.

ಬೆಂಗಳೂರು ಮೂಲದವರಾದ ದ್ರಾವಿಡ್ ಸತತ ೧೬ ವರ್ಷಗಳಿಂದ ಭಾರತದ ಕ್ರಿಕೆಟ್ ತಂಡಕ್ಕೆ ಸೇವೆ ಸಲ್ಲಿಸಿ ಅಭಿಮಾನಿಗಳ ಪ್ರೀತಿಗೆ ಪಾತ್ರರಾಗಿದ್ದಾರೆ.

ಈ ಏಕದಿನ ಪಂದ್ಯ ನನ್ನ ಕೊನೆಯ ಪಂದ್ಯ ಎಂದು ಘೋಷಿಸಿದ ದ್ರಾವಿಡ್‌ಗೆ

## ಚಕ್ರಾಧಿವೇಶನದ ಸ್ಮರಣೆ ಅಗತ್ಯ : ಜವರಯ್ಯ

ಮೈಸೂರು

ಐತಿಹಾಸಿಕ ಘಟನೆಗಳನ್ನು ಒಳಗೊಂಡ ಪೂನ ಒಪ್ಪಂದಕ್ಕೆ ೭೯ ವರ್ಷಗಳ ಇತಿಹಾಸವಿದೆ, ಅಂಬೇಡ್ಕರ್ ರವರ ಪೂನ ಒಪ್ಪಂದದ ಪೂರ್ವ ಮತ್ತು ನಂತರದ ಘಟನೆಗಳ ಬಗ್ಗೆ ಸ್ಮರಣೆ ಅಗತ್ಯವಾಗಿದೆ ಎಂದು ಪ್ರೊ.ಜವರಯ್ಯ ಹೇಳಿದರು.

ಇತ್ತೀಚೆಗೆ ಡಾ॥ ಬಿ.ಆರ್. ಅಂಬೇಡ್ಕರ್ ಸಂಶೋಧನ ಹಾಗೂ ವಿಸ್ತರಣ ಕೇಂದ್ರದ ವತಿಯಿಂದ ದಿ.೨೪ರಂದು ನಡೆದ 'ಪೂನ ಒಡಂಬಡಿಕೆ' ಹಿನ್ನೆಲೆ ಹಾಗೂ ಅಂಬೇಡ್ಕರ್ ಜೀವನದ ಐತಿಹಾಸಿಕ ಘಟನೆಯ ಬಗ್ಗೆ ವಿಶೇಷ ಉಪನ್ಯಾಸದಲ್ಲಿ ಈ ಮಾತನ್ನು ಹೇಳಿದರು.

ಪೂನ ಒಪ್ಪಂದದ ಪೂರ್ವದಲ್ಲಿ ದೇಶಾದ್ಯಂತ ಬೃಹತ್ ಆಂದೋಲನ ಹಾಗೂ ಚಳುವಳಿಗಳು ಬಹಳ ಮುಕ್ತವಾಗಿದ್ದವು. ಇಂತಹ ಆಂದೋಲನ, ಚಳುವಳಿ ಇಂದಿನ ಪೀಳಿಗೆಯ ಯುವಕರಿಗೆ ಬಹಳ ಯುಕ್ತವಾಗಿದೆ ಎಂದರು.

ಮೊದಲ ಚಕ್ರಾಧಿವೇಶನದ ಸಂದರ್ಭ ಅಂಬೇಡ್ಕರ್ ಮತ್ತು ಗಾಂಧೀಜಿ ನಡುವೆ ಅನೇಕ ಭಿನ್ನಾಬಿಪ್ರಾಯಗಳು ಇದ್ದವು, ಆದರೂ ಸಹ ಗಾಂಧೀಜಿ ಧಾರ್ಮಿಕ ನೆಲೆಗಟ್ಟಿನಲ್ಲಿ ಹೋರಾಟ ನಡೆಸಿದರೆ, ಅಂಬೇಡ್ಕರ್ ಸಾಮಾಜಿಕ ಮತ್ತು ರಾಜಕೀಯ ನೆಲೆಗಟ್ಟಿನ ಆಧಾರದ ಮೇಲೆ ಹೋರಾಟ ನಡೆಸಿದರು. ಗಾಂಧೀಜಿ ಖಳನಾಯಕನೆಂದು ತಿಳಿಯುವುದು ತಪ್ಪು. ಗಾಂಧೀಜಿ ಮೇಲ್ವಾರ್ಗದವರ ತಾಳಕ್ಕೆ ಕುಣಿಯಬೇಕಾದ ಸಂದರ್ಭ ಆ ದಿನಗಳಲ್ಲಿ ಇರುವುದನ್ನು ಗಮನಿಸಬೇಕು ಎಂದು ಅಭಿಪ್ರಾಯಪಟ್ಟರು.

**ಕೃಷ್ಣರಾಜ ಬಿ**

# ಮೈಸೂರು ವಿ.ವಿಯ ಗ್ರಂಥಾಲಯ ಓದುಗರ ಸ್ವರ್ಗವಿದ್ದಂತೆ – ಗೋನಾಳ



ಉದ್ಯೋಗ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರವನ್ನು ಉದ್ಘಾಟಿಸಿದ ಗೋನಾಳ ಭೀಮಪ್ಪ. ಚಿತ್ರದಲ್ಲಿ ಮೈ.ವಿ.ವಿ ಕುಲಪತಿ ಪ್ರೊ. ವಿ.ಜಿ.ತಳವಾರ, ಪ್ರೊ.ಆರ್.ಎಸ್.ದೇಶಪಾಂಡೆ ಸೇರಿದಂತೆ ಮತ್ತಿತರರನ್ನು ಕಾಣಬಹುದು.

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಗ್ರಂಥಾಲಯವು ಓದುಗರ ಸ್ವರ್ಗವಿದ್ದಂತೆ ಎಂದು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಗೋನಾಳ ಭೀಮಪ್ಪ ರವರು ಅಭಿಪ್ರಾಯಪಟ್ಟರು.

ದಿ.೨೯ರಂದು ಮೈಸೂರು ವಿಶ್ವವಿದ್ಯಾನಿಲಯ ಆಯೋಜಿಸಿದ್ದ ಉದ್ಯೋಗ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರದ ಉದ್ಘಾಟನಾ ಕಾರ್ಯಕ್ರಮವನ್ನು ನೆರವೇರಿಸಿ ಈ ಮಾತನ್ನು ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯವು ಆರಂಭಿಸಿರುವ ಉದ್ಯೋಗ ಮಾಹಿತಿ ಮತ್ತು ಸಂಪನ್ಮೂಲ ಕೇಂದ್ರ ಉದ್ಯೋಗ ಆಕಾಂಕ್ಷಿಸುವವರಿಗೆ ಉತ್ತಮ ಮಾರ್ಗ ದರ್ಶನ ಘಟಕವಾಗಲಿದೆ ಎಂದು ಭವಿಷ್ಯ ನುಡಿದರು. ಮೈಸೂರು ವಿ.ವಿ ಗ್ರಂಥಾ ಲಯ ಸುಮಾರು ೨೦ ಸಾವಿರ ಪುಸ್ತಕ ಗಳನ್ನು, ಜರ್ನಲ್‌ಗಳನ್ನು ಮತ್ತು ಲೇಖನಗಳನ್ನು ಅಂತರ್ಜಾಲದಲ್ಲಿ ಶೇಖರಿಸಿ ಓದುವುದನ್ನು ಸರಳೀಕರಿಸುವ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತವಾಗಿದೆ. ಇದು ಅತ್ಯಂತ ಹೆಮ್ಮೆಯ ಸಂಗತಿ ಎಂದು ಹರ್ಷವ್ಯಕ್ತಪಡಿಸಿದರು. ಕರ್ನಾಟಕ ಲೋಕಸೇವಾ ಆಯೋಗದ ೧೩ನೇ ಅಧ್ಯಕ್ಷರಾಗಿ ೪ ವರ್ಷ ೩ ತಿಂಗಳ ವರೆಗಿನ ಕಾರ್ಯಕ್ಷಮತೆ ತೃಪ್ತಿಕರವಾಗಿದೆ ಎಂದು ತಿಳಿಸಿದರು. ಕರ್ನಾಟಕ ಲೋಕಸೇವಾ ಆಯೋಗದ ಕಾರ್ಯ ಕ್ಷೇತ್ರದ ಬಗ್ಗೆ ಸವಿಸ್ತಾರವಾದ ಮಾಹಿತಿ ನೀಡಿ ಆಯೋಗಕ್ಕಿರುವ ಮುಂದಿನ ಸವಾಲುಗಳ ಕುರಿತು ಮಾಹಿತಿ ನೀಡಿದರು. ವಿದ್ಯಾರ್ಥಿಗಳು ಮೈಸೂರು ವಿ.ವಿ ಆರಂಭಿಸಿರುವ ಈ ಉದ್ಯೋಗ ಮಾಹಿತಿ ಮತ್ತು ಸಂಪನ್ಮೂಲ ಘಟಕದ ಉಪಯೋಗವನ್ನು ಸದುಪಯೋಗ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಮೈಸೂರು ವಿ.ವಿ ಕುಲಪತಿ ಪ್ರೊ.ವಿ.ಜಿ. ತಳವಾರ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ನಿರ್ದೇಶಕ ಪ್ರೊ. ಆರ್.ಎಸ್. ದೇಶಪಾಂಡೆ ಆಗಮಿಸಿದ್ದರು. ಮೈಸೂರು ವಿ.ವಿ ಗ್ರಂಥಾಲಯದ ಅಂತರ್ಜಾಲ ಸೇವೆಯ ಸಂಪೂರ್ಣ ಮಾಹಿತಿಯನ್ನು ನಾಗನವಾರ ನೀಡಿದರು.

**ಹೈಮದ್ ಹುಸೇನ್ ದಂಡ್**

## ಭೂ ವಿಜ್ಞಾನ ಕ್ಷೇತ್ರದಲ್ಲಿ ಅನಾನುಭವಿಗಳು : ಸುಂದರ ಮೂರ್ತಿ

ಮೈಸೂರು

ದೇಶದಲ್ಲಿ ಭೂ ವಿಜ್ಞಾನ ವಿಭಾಗವು ಮಾನವ ಸಂಪನ್ಮೂಲ ಕೊರತೆ ಎದುರಿಸುತ್ತಿದೆ ಎಂದು ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾದ ನಿರ್ದೇಶಕ ಎ. ಸುಂದರ ಮೂರ್ತಿ ಖೇದ ವ್ಯಕ್ತಪಡಿಸಿದ್ದಾರೆ.

ಮೈಸೂರು ವಿ.ವಿಯ ಭೂ ವಿಜ್ಞಾನ ವಿಭಾಗದಲ್ಲಿ ಇತ್ತೀಚೆಗೆ ನಡೆದ ಪ್ರೊ. ಎಂ.ಎನ್ ವಿಶ್ವನಾಥಯ್ಯ ಅವರ ೯೦ನೇ ವರ್ಷದ ಜನ್ಮ ದಿನಾಚರಣೆ ಮತ್ತು ಭೂ ವಿಜ್ಞಾನ ಸುವರ್ಣ ಮಹೋತ್ಸವ ಹಾಗೂ ರಾಷ್ಟ್ರಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಭೂ ವಿಜ್ಞಾನ ಕ್ಷೇತ್ರದಲ್ಲಿ ಹೇರಳ ಅವಕಾಶಗಳಿದ್ದು ಅನುಭವಿಗಳ ಕೊರತೆಯಿಂದ ಈ ಕ್ಷೇತ್ರ ಹಿನ್ನೆಡೆ ಅನುಭವಿಸುತ್ತಿದೆ. ಕಳೆದ ೫ ವರ್ಷಗಳಲ್ಲಿ ಭೂ ವಿಜ್ಞಾನ ವಿಭಾಗದಲ್ಲಿ ಯಾವುದೇ ನೇಮಕಾತಿ ನಡೆದಿಲ್ಲ ಸಂಶೋಧನೆಗೆ ಸರ್ಕಾರಗಳು ಅನುದಾನವನ್ನು ಸಹ ಬಿಡುಗಡೆ ಮಾಡಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಕಾರ್ಯಾಗಾರದಲ್ಲಿ ಮೈಸೂರು ವಿ.ವಿ ಕುಲಪತಿ ವಿ.ಜಿ.ತಳವಾರ ಪ್ರೊ. ಜೆ.ಎ ತರಿನ್, ಲಕ್ನೋ ಡಿ.ಎಸ್.ಐಪಿ

ಮಾನಸ ಗಂಗೋತ್ರಿ

ನುಡಿಮುತ್ತು

ಅರಿತು ಮಾಡುವುದು ಪಾಪ,
ಮರೆತು ಮಾಡಿದ್ದು ಮನುಷ್ಯ ಸ್ವಭಾವ

ತ.ರಾ.ಸು

ಸಂಪಾದಕ ಮಂಡಳಿ

| | | |
|---|---|---|
| ಸಂಪಾದಕರು | : | ಪ್ರೊ.ಎನ್.ಉಷಾರಾಣಿ |
| ಕಾರ್ಯಕಾರಿ ಸಂಪಾದಕರು | : | ಡಾ॥ ಸಿ.ಕೆ. ಪುಟ್ಟಸ್ವಾಮಿ |
| ವಿದ್ಯಾರ್ಥಿ ಸಂಪಾದಕರು | : | ಅವಿನಾಶ್ ಜೆ.ಕೆ, ಸಿ.ಎಂ. ಚೇತನ ಚೈತ್ರ, ಹೈಮದ್ ಹುಸೇನ್ ದಂಡ್, ಕೃಷ್ಣರಾಜ ಬಿ, ಮಹದೇವಸ್ವಾಮಿ. |
| ಪುಟ ವಿನ್ಯಾಸ | : | ಹೈಮದ್ ಹುಸೇನ್ ದಂಡ್ |
| ತಾಂತ್ರಿಕ ನೆರವು | : | ಶ್ರೀನಾಥ ಅರಸ್ |


## ಸಂಪಾದಕೀಯ

# ಕನ್ನಡಕ್ಕೆ ಮತ್ತೊಂದು ಗರಿ

ಕನ್ನಡ ಸಾಹಿತ್ಯ ಕೃಷಿಯ ನೇಕಾರ, ಜನಪದ ಸೊಗಡಿನ ಸಾಹಿತಿ, ಕನ್ನಡ ಸಿರಿ ಸಂಪಿಗೆ ಮುಡಿಗೆ ಜ್ಞಾನದೇವತೆ ಸರಸ್ವತಿ ಕಂಚಿನ ವಿಗ್ರಹವನ್ನು ಪಡೆಯುವುದರ ಮೂಲಕ ರಾಷ್ಟ್ರದ ಅತ್ಯುನ್ನತ ಗೌರವಯುತ ಜ್ಞಾನಪೀಠ ಪ್ರಶಸ್ತಿಗೆ ಡಾ॥ ಚಂದ್ರಶೇಖರ ಕಂಬಾರರವರು ಭಾಜನರಾಗಿರುವುದು ಹೆಮ್ಮೆಯ ಸಂಗತಿ. ನೂರೆಂಟು ಭಾಷೆಗಳಿರುವ ಭಾರತದಲ್ಲಿ ಕನ್ನಡವೊಂದಕ್ಕೆ ಎಂಟು ಪ್ರಶಸ್ತಿ ಪಡೆದುಕೊಂಡಿರುವುದು ಮರೆಯಲಾರದ ಇತಿಹಾಸ.

ಕಂಬಾರರು ಸಾಹಿತ್ಯ ಕ್ಷೇತ್ರಕ್ಕೆ ಅಪಾರ ಸೇವೆ ಸಲ್ಲಿಸುತ್ತಿದ್ದಾರೆ. ಕತೆ, ಕವಿತೆ, ನಾಟಕ, ಕಾದಂಬರಿ, ವಿಮರ್ಶೆ ಹಾಗೂ ಸಂಶೋಧನೆ ಸೇರಿದಂತೆ ಎಲ್ಲಾ ಕ್ಷೇತ್ರದಲ್ಲಿ ಛಾಪು ಮೂಡಿಸುತ್ತಾ ತಮ್ಮ ಬದುಕನ್ನು ಹಸನಾಗಿಸಿಕೊಂಡಿದ್ದಾರೆ. ಇವರ ಪ್ರಮುಖ ನಾಟಕಗಳಾದ ಜೋಕುಮಾರಸ್ವಾಮಿ, ಸಂಗ್ಯಾಬಾಳ್ಯ, ಋಷ್ಯಶೃಂಗ, ಹುಲಿಯನೆರಳು ಸೇರಿದಂತೆ ಇನ್ನಿತರವು ಆಧುನಿಕ ರಂಗಭೂಮಿಗೆ ಕೊಟ್ಟ ಅನನ್ಯ ಕೊಡುಗೆಯಾಗಿದೆ. ಹಾಗೆಯೇ ಇವರ ಕವಿತೆಗಳಿಗೂ ಕೂಡ ಜಾನಪದವು ಸಾರಥಿಯಾಗಿ ಮುನ್ನಡೆಸುತ್ತಿದೆ. ಕಂಬಾರರ ಪ್ರಸಿದ್ಧ ಬೆಳ್ಳಿಮೀನು, ಅಕ್ಕಕ್ಕೂ ಹಾಡುಗಳೇ ಸಾವಿಂದ ನೆರಳು, ಹೇಳತೇನ ಕೇಳ... ಮುಂತಾದವುಗಳು ಸಾಹಿತ್ಯ ಲೋಕಕ್ಕೆ ನೀಡಿದ ಶ್ರೇಷ್ಠ ಕಾವ್ಯವಾಗಿ ನೆಲೆ ನಿಂತಿವೆ. ಉತ್ತರ ಕರ್ನಾಟಕದ ಉಳಿಗಮಾನ್ಯ ವ್ಯವಸ್ಥೆಯಲ್ಲಿ ಹುಟ್ಟಿಕೊಂಡ ವೈಭವೀಕೃತ ದೇಸಿ ನಾಟಕಗಳಿಗೆ ವೈಚಾರಿಕತೆಯ ಸ್ಪರ್ಶ ನೀಡಿ ಸಮಾಜವಾದದ ಬೆಳಕು ಚೆಲ್ಲಿದ ಕಂಬಾರರು ಈ ಬಯಲಾಟದ ದೇಸಿ ಪರಂಪರೆಯನ್ನು ಉಳಿಸಿಕೊಂಡೇ ಸಮಕಾಲೀನ ಮೌಲ್ಯಕ್ಕೆ ಸ್ಪಂದಿಸಿದ ಮಹತ್ವದ ನಾಟಕರಾಗಿದ್ದಾರೆ.

ಸಿಂಗಾರವ್ವ ಮತ್ತು ಅರಮನೆ, ಶಿಖರ ಸೂರ್ಯ, ಜೀ.ಕೆ.ಮಾಸ್ತರರ ಪ್ರಣಯ ಪ್ರಸಂಗ ಮತ್ತು ಕರಿಮಾಯಿ ಇನ್ನಿತರ ಕಾದಂಬರಿಗಳು ಮೂಲಕವೂ ಇವರು ಮನೆ ಮಾತಾಗಿದ್ದಾರೆ. ವರಕವಿ ಬೇಂದ್ರೆಯವರ ಕಾಲದಿಂದ ಕನಸಾಗಿಯೇ ಉಳಿದಿದ್ದ ಕನ್ನಡ ವಿಶ್ವವಿದ್ಯಾಲಯಕ್ಕೆ ಸಾಕಾರ ಕೊಟ್ಟ ಒಬ್ಬ ಆದರ್ಶ ಶಿಲ್ಪಿಯಾಗಿ, ಕನ್ನಡ ನಾಡಿಗೆ ಶ್ರೇಷ್ಠ ಕವಿಯಾಗಿ ಭಿನ್ನಪರಾಗಿದ್ದಾರೆ. ಸಾಹಿತ್ಯದ ಜೊತೆ ಒಡನಾಡಿಯಾಗಿ, ಶ್ರೇಷ್ಠ ಚಿಂತಕರಾಗಿ, ದೇಸಿ ಪರಂಪರೆಯ ಸಮರ್ಥಕರಾಗಿ, ಶಿಕ್ಷಣ ತಜ್ಞರಾಗಿ, ಮಾನವೀಯ ಮೌಲ್ಯಗಳನ್ನು ಸಾರುವ ಒಬ್ಬ ಉದಾತ್ತ ವ್ಯಕ್ತಿಯಾಗಿದ್ದಾರೆ. ಭಾರತದ ಜನಮನದಲ್ಲಿ ಚಿರಸ್ಥಾಯಿಯಾಗಿ ಉಳಿಯುವ ಸಾಹಿತ್ಯ ಕೃಷಿಯನ್ನು ಕಂಬಾರರು ಮಾಡುತ್ತಿದ್ದಾರೆ ತಮ್ಮ ಜೀವಿತಾವಧಿಯಲ್ಲಿ ಪದ್ಮಶ್ರೀ ಪ್ರಶಸ್ತಿ ಜೊತೆಗೆ ಜ್ಞಾನಪೀಠಕ್ಕೂ ಪಾತ್ರರಾಗಿರುವುದಲ್ಲದೇ ರಾಜ್ಯಕ್ಕೆ ೧೩ ವರ್ಷದ ನಂತರ ೮ನೇ ಜ್ಞಾನಪೀಠ ಪ್ರಶಸ್ತಿ ತಂದುಕೊಟ್ಟು ನಾಡಿಗೆ ವರವಾಗಿದ್ದಾರೆ. ಕನ್ನಡಕ್ಕೆ ಇನ್ನು ಮುಂದೆ ನಿರಂತರವಾಗಿ ಉನ್ನತ ಪ್ರಶಸ್ತಿಗಳು ನಮ್ಮ ನಾಡಿನ ಪ್ರತಿಭೆಗಳಿಗೆ ದಕ್ಕಲಿ. ಮತ್ತು ಈ ಸಾರಿ ಪ್ರಶಸ್ತಿ ಲಭಿಸಿದ್ದಕ್ಕೆ ಡಾ॥ ಚಂದ್ರಶೇಖರ ಕಂಬಾರರಿಗೆ ಅನಂತ ಅನಂತ ಅಭಿನಂದನೆಯನ್ನು ಹಾರೈಸೋಣ.

## ಕಾರ್ಟೂನ್ ಕಾರ್ನರ್



# ಇತಿಹಾಸ ಸಾರುತ್ತಿರುವ ಅಂಬಾವಿಲಾಸ

ಮೈಸೂರು ನಗರದ ಅನೇಕ ಆಕರ್ಷಣೀಯ ಸ್ಥಳಗಳಲ್ಲಿ ಅಂಬಾವಿಲಾಸ ಅರಮನೆಯು ಬಹಳ ಪ್ರಮುಖವಾದದು ಇಡೀ ನಗರಕ್ಕೆ ಸಾಂಸ್ಕೃತಿಕ ನಗರಿ ಎಂದು ಪಸರಿಸುವಲ್ಲಿ ಅರಮನೆ ಪ್ರೇಕ್ಷಣೀಯವಾಗಿದೆ. ವಾಸ್ತವವಾಗಿ ೧೮೯೭ರಲ್ಲಿ ಅಗ್ನಿಗೆ ಆಹುತಿಯಾದ ಹಳೆಯ ಅರಮನೆಯ ಸ್ಥಳದಲ್ಲಿ ಈ ನೂತನ ಅರಮನೆಯನ್ನು ಕಟ್ಟಲಾಗಿದೆ.

ಇಂಡೊ-ಸಾರ್ಸೆನಿಕ್ ಶೈಲಿಯಲ್ಲಿರುವ ಅರಮನೆಯ ಕಟ್ಟಡದ ಕೆಲಸವನ್ನು ೧೯೧೨ ರಲ್ಲಿ ಪೂರ್ಣಗೊಳಿಸಲಾಯಿತು. ಈ ಕಟ್ಟಡಕ್ಕಾಗಿ ಬಳಸಲಾದ ಹಣದ ವೆಚ್ಚ ರೂ ೪೧.೫೦ ಲಕ್ಷಗಳು. ಅರಮನೆಯ ವಾಸ್ತು ಶಿಲ್ಪದ ಪೂರ್ಣ ಜವಾಬ್ದಾರಿ ಯನ್ನು ಹೆನ್ರಿ ಇರ್ವಿನ್ ರವರು ವಹಿಸಿಕೊಂಡಿದ್ದರು, ಇವರ ಜೊತೆಗೆ ಸಹಾಯಕ ಇಂಜಿನಿಯಾರಾಗಿ ಈ ಡಬ್ಲ್ಯು ಫ್ರಿಜ್ಞ್ ಸಹಾಯ ಹಸ್ತ ನೀಡಿದರು.

ಅರಮನೆಯ ಒಳಾಂಗಣದಲ್ಲಿ ಪ್ರಮುಖವಾಗಿ ಎರಡು ಭಾಗಗಳಿವೆ, ಒಂದು ಸಮಾರಂಭಕ್ಕೆ ಮೀಸಲಾಗಿಸಿದರೆ ಮತ್ತೊಂದನ್ನು ನಿವಾಸಕ್ಕೆ ಮೀಸಲಿಡ ಲಾಗಿದೆ, ನೆಲಮಾಳಿಗೆಯ ಪೂರ್ವದ ಅರ್ಧ ಭಾಗದಲ್ಲಿ ಸಮಾರಂಭದ ಕೊಠಡಿ ಗಳಿದ್ದು ಅವುಗಳನ್ನು ಗೊಂಬೆ ತೊಟ್ಟಿ (ಡಾಲ್ಸ್ ಪೆವಿಲಿಯನ್) ಮತ್ತು ಕಲ್ಯಾಣ ಮಂಟಪ ಎಂದು ಕರೆಯುತ್ತಾರೆ.

ವಾಸ್ತವವಾಗಿ, ಈ ಗೊಂಬೆ ತೊಟ್ಟಿ ಯನ್ನು ದಸರಾ ಹಬ್ಬದ ಸಮಯದಲ್ಲಿ ಗೊಂಬೆಗಳ ಪ್ರದರ್ಶನಕ್ಕಾಗಿ ಬಳಸಿ ಕೊಳ್ಳಲಾಗುತ್ತದೆ. ಯುರೋಪಿಯನ್ ಮಾದರಿಯ ಅಮೃತ ಶಿಲೆಯಿಂದ ಮಾಡಲ್ಪಟ್ಟ ಶಿಲ್ಪಗಳೂ, ಹಳೆಯ ಅರಮನೆಯ ಮರದ ಮಾದರಿಗಳು, ಭಾರತೀಯ ಮಾದರಿಯ ಅಮೃತ ಶಿಲೆಯ ಶಿಲ್ಪಗಳು ಇಲ್ಲಿ ಕಾಣಸಿಗುತ್ತದೆ. ಇನ್ನೂ ಕಲ್ಯಾಣ ಮಂಟಪ ಕಟ್ಟಡದ ಗೋಡೆಗಳು ಸುಪ್ರಸಿದ್ಧ ಕಲಾಕಾರರ ತೈಲ ವರ್ಣಚಿತ್ರಗಳಿಂದ ಅಲಂಕರಿಸಲ್ಪಟ್ಟಿದೆ.



ಅಂಬಾವಿಲಾಸ ಅರಮನೆಯ ವಿಹಂಗಮ ನೋಟ..

ಆಯುಧಗಾರ ಮತ್ತು ಟ್ರೋಫಿ ಕೊಠಡಿಗಳು ಅರಮನೆಯ ಉತ್ತರ ದಿಕ್ಕಿನಲ್ಲಿರುವ ಕಲ್ಯಾಣ ಮಂಟಪದ ಹತ್ತಿರ ಇದೆ. ಇದನ್ನು ಚೌಕಾಂಗಣದಿಂದ ಬೇರ್ಪಡಿಸಿ ಕಟ್ಟಲಾಗಿದೆ. ಈ ಆಯುಧ ಶಾಲೆಯು ವಿವಿಧ ಬಗೆಯ ಪುರಾತನ ಆಯುಧಗಳ ಸಂಗ್ರಹವನ್ನು ಹೊಂದಿದೆ. ಈ ಸಂಗ್ರಹವು ನೂರು (೧೦೦) ವರ್ಷಕ್ಕೂ ಹಳೆಯದಾದವು, ಆಯುಧಗಳ ಮೇಲೆ ಹೆಸರುಗಳು ಇರುವುದನ್ನು ಕಾಣಬಹುದು, ಹೆಸರುಗಳೆಂದರೆ ಮುದ್ಗರ, ಬಾಕು, ಪಂಚ-ಕಠಾರಿ, ಚೂರಿ,ಚುರ ಇತ್ಯಾದಿ ಇವುಗಳಲ್ಲಿ ಅನೇಕ ಆಯುಧಗಳು ಪರ್ಶಿಯನ್ ಮಾದರಿಯನ್ನು ಹೊಂದಿವೆ.

ಹಾಗೆ ಅರಮನೆಯ ಮೊದಲ ಮಹಡಿಯಲ್ಲಿ ಸಾರ್ವಜನಿಕ ದರ್ಬಾರ್ (ದಿವಾನ್-ಎ-ಆಮ್) ಮತ್ತು ಖಾಸಗಿ ದರ್ಬಾರ್, ಅಂಬಾವಿಲಾಸ್, (ದಿವಾನ್-ಎ-ಖಾನ್)ಗಳು ಇವೆ. ದರ್ಬಾರ್ ಹಾಲ್ ನಲ್ಲಿ ಮಹಾರಾಜರು ದಸರಾ ಸಮಯದಲ್ಲಿ ಬಂದಂತಹ ಅತಿಥಿಗಳನ್ನು ಆಹ್ವಾನಿಸಿ ಈ ದರ್ಬಾರ್ ನಡೆಸುತ್ತಿದ್ದರು. ಹಾಲಿನ ಮುಂದಿರುವ ವಿಶಾಲವಾದ ಅಂಗಳ ಮತ್ತು ಭವ್ಯವಾದ ಜಯ ಮಾರ್ತಾಂಡ ದ್ವಾರದ ವಿಹಂಗಮ ದೃಶ್ಯಗಳನ್ನು ವೀಕ್ಷಿಸಬಹುದು.

**ಚಿನ್ನದ ಸಿಂಹಾಸನ:**ಅರಮನೆಯ ಪ್ರಮುಖ ಆಕರ್ಷಣೆಯ ಚಿನ್ನದ ಸಿಂಹಾಸನ ಮೂಲತಃ ಫಿಗ್‌ವುಡ್‌ನಿಂದ ತಯಾರಿಸಲ್ಪಟ್ಟಿದೆ. ಇದು ಅತ್ಯಂತ ಸುಂದರವಾಗಿದ್ದು, ಇದನ್ನು ಚಿನ್ನದಿಂದ ಲೇಪಿಸಲಾಗಿದೆ. ದಸರಾ ಸಮಯದಲ್ಲಿ ಈ ಚಿನ್ನದ ಸಿಂಹಾಸನಕ್ಕೆ ಶ್ರೀಕಂಠದತ್ತ ನರಸಿಂಹರಾಜ ಒಡೆಯರು ಭಕ್ತಿ ಪೂರ್ವಕವಾಗಿ ಪೂಜಾ ಕೈಂಕರ್ಯ ಗಳನ್ನು ನೆರವೇರಿಸುತ್ತಾರೆ. ದಸರಾ ಸಮಯದಲ್ಲಂತೂ ಅರಮನೆ ಮತ್ತು ಇನ್ನಿತರ ಸ್ಥಳಗಳನ್ನು ನೋಡಲಿಕ್ಕೆ ಎರಡು ಕಣ್ಣು ಸಾಲದು.....

# ಪತ್ರ ಗಂಗೋತ್ರಿ

## ಗಂಗೋತ್ರಿ ಧೂಮಪಾನ ಮುಕ್ತವಲಯವನ್ನಾಗಿ ಮಾಡಿ

ಗಂಗೋತ್ರಿ ಆವರಣದಲ್ಲಿ ತಂಬಾಕು ಮಾರಾಟ ಹಾಗೂ ಧೂಮಪಾನ ಮಾಡುವಂತಿಲ್ಲ ಆದರೆ ನಮ್ಮ ಗಂಗೋತ್ರಿಯಲ್ಲಿ ಇದಕ್ಕೆ ವಿರೋಧ ನೀತಿ ಅನುಸರಿಸ ಲಾಗು ತ್ತಿದೆ. ವಿದ್ಯಾರ್ಥಿಗಳು ಆವರಣ ದಲ್ಲಿಯೇ ಧೂಮಪಾನ ಮಾಡುತ್ತಾರೆ ಹಾಗೂ ಗುಟ್ಕಾ ತಂಬಾಕು ಜಗಿ ಯುತ್ತಿದ್ದಾರೆ.

ಅದರಲ್ಲಿಯು ಕ್ಯಾಂಟೀನ್‌ನಲ್ಲಿ ಹೆಚ್ಚಾಗಿದ್ದು ವಿದ್ಯಾರ್ಥಿಗಳು ಮೂಗು ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ. ಕ್ಯಾಂಟೀನ್ ನಲ್ಲಿ ಕುಳಿತುಕೊಳ್ಳುವುದು ಸಹ ಸಾಧ್ಯ ವಾಗುತ್ತಿಲ್ಲ. ಮೊದಲೇ ಧೂಮಪಾನ ಮುಕ್ತವಲಯ ಎಂದು ಘೋಷಿಸಿ ದ್ದರು ಸಹ ಅದು ಕಾರ್ಯರೂಪಕ್ಕೆ ಬರುತ್ತಿಲ್ಲ. ಆದ್ದರಿಂದ, ಆಡಳಿತ ಮಂಡಳಿ ಇತ್ತ ಗಮನ ಹರಿಸಿ ಕ್ಯಾಂಪಸ್ ನಲ್ಲಿ ತಂಬಾಕು, ಗುಟ್ಕಾ ಮಾರಾಟ ಹಾಗೂ ಧೂಮಪಾನ ಮಾಡುವುದನ್ನು ನಿಷೇಧಿಸಬೇಕೆಂದು ತಮ್ಮಲ್ಲಿ ವಿನಂತಿ.

## ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿ

ಮಾನಸಗಂಗೋತ್ರಿ ಸ್ನಾತಕೋತ್ತರ ಅಧ್ಯಯನ ವಿಭಾಗಗಳು ದೇಶದ ಪ್ರಸಿದ್ಧ ಅಧ್ಯಯನ ವಿಭಾಗಗಳಲ್ಲಿ ಒಂದು. ಈ ಅಧ್ಯಯನ ವಿಭಾಗಗಳು ಉತ್ತಮ ಪರಿಸರದ ವ್ಯವಸ್ಥೆಯನ್ನು ಕಲ್ಪಿಸಿದೆ. ಇಲ್ಲಿ ಇರುವ ಸುಮಾರು ೫೦ ವಿಭಾಗಗಳಿಂದ ಸುಮಾರು ೩೦೦೦ಕ್ಕೂ ಅಧಿಕ ವಿದ್ಯಾರ್ಥಿಗಳು ಸ್ನಾತಕೋತ್ತರ ಪದವಿ ಹಾಗೂ ಸಂಶೋದನಾತ್ಮಕ ಅಧ್ಯಯನವನ್ನು ಮಾಡುತ್ತಾರೆ.

ಆದರೆ ಇವರೆಲ್ಲ ಕುಡಿಯುವ ನೀರಿಗೆ ಹೆಚ್ಚಾಗಿ ಅವಲಂಬಿಸಿರುವುದು ಕ್ಯಾಂಪಸ್ನಲ್ಲಿರುವ ರೌಂಡ್ ಕ್ಯಾಂಟೀನ್‌ನನ್ನು. ಕೆಲವೊಂದು ವಿಭಾಗಗಳಲ್ಲಿ ಬಾಟಲ್‌ಗಳಲ್ಲಿ ನೀರನ್ನು ಇಟ್ಟಿದ್ದರೆ ಉಳಿದ ವಿಭಾಗಗಳಲ್ಲಿ ಕನಿಷ್ಟ ವ್ಯವಸ್ಥೆಯು ಸಹ ಇಲ್ಲ. ವಿದ್ಯಾರ್ಥಿಗಳು ಕುಡಿಯುವ ನೀರಿಗಾಗಿ ತಮ್ಮ ವಿಭಾಗಗಳಿಂದ ಕ್ಯಾಂಟಿನ್ ಕಡೆಗೆ ಧಾವಿಸುವುದು ದಿನನಿತ್ಯದ ಪರಿಪಾಟವಾಗಿದ್ದು. ಇದ-ರಿಂದ ವಿದ್ಯಾರ್ಥಿಗಳು ತಮ್ಮ ಚಂಚಲ ಮನಸ್ಸಿನಿಂದಾಗಿ ಮುಂದಿನ ತರಗತಿಗೆ ಹೋಗುವ ಮನಸ್ಸಾಗದೆ ಚಕ್ಕರ್ ಹಾಕುವುದು ಸರ್ವೆ ಸಾಮಾನ್ಯವಾಗಿದೆ.ಆದ್ದ-ರಿಂದ ಸಂಬಂಧಪಟ್ಟವರು ಇತ್ತ ಗಮನಹರಿಸಿ ಪ್ರತಿ ವಿಭಾಗಗಳಲ್ಲಿಯೂ ಶುದ್ಧ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಿಕೊಡಬೇಕಾಗಿ ವಿನಂತಿ.

ಕ.ವನ್, ಪ್ರಥಮ ಪತ್ರಿಕೋದ್ಯಮ

ರಮೇಶ

## ಗೊಂದಲವಾದ ಸಿ.ಬಿ.ಸಿ.ಎಸ್ ಅಂಕಪಟ್ಟಿ

ಇದೀಗ ತಾನೇ ಪ್ರಥಮ ಚತುರ್ಮಾಸದ ಅಂಕಪಟ್ಟಿಯು ವಿದ್ಯಾರ್ಥಿಗಳ ಕೈ ಸೇರಿದ್ದು, ಅಂಕಪಟ್ಟಿಯನ್ನು ನೋಡು-ನೋಡುತ್ತಿದ್ದಂತೆ ಗೊಂದಲ ಸೃಷ್ಟಿಯಾಗಿದೆ. ಇದು ಜೆರಾಕ್ಸ್ ಪ್ರತಿಯಂತೆ ಕಾಣಿಸುತ್ತಿದ್ದು, ನಿಜವಾದ ಪ್ರತಿಯೇ ಎಂಬುವುದು ತಿಳಿಯುತ್ತಿಲ್ಲ, ಕ್ರೆಡಿಟ್ಸ್ ಜೊತೆಗೆ ಇಂಟರ್‌ನಲ್, ಪರೀಕ್ಷೆಯ ಅಂಕಗಳನ್ನು ನಮೂದಿಸಿಲ್ಲ. ಅಂಕಪಟ್ಟಿಯನ್ನು ನೋಡಿದರೆ ಪರೀಕ್ಷೆ ಎದುರಿಸಿದ ವಿದ್ಯಾರ್ಥಿಗಳು ಗಲಿಬಿಲಿಯಾಗಿ ಪರಿಣಮಿಸುತ್ತದೆ.

ಬದಲಾಗಿ ಕ್ರೆಡಿಟ್ಸ್ ಆಧಾರದ ಮೇಲೆ ನೀಡಿದ್ದು, ಒಟ್ಟಾಗಿ ಸೇರಿಸಿ ಗ್ರೇಡನ್ನು ಕೊಟ್ಟಿದ್ದಾರೆ, ಇದನ್ನು ಯಾವ ರೀತಿ ಅರ್ಥೈಸಿಕೊಳ್ಳುವುದು ಕ್ಲಿಷ್ಟವಾಗಿ ಪರಿಣಮಿಸಿದೆ.

ಯಾವುದಾದರೂ ಸ್ಪರ್ಧಾತ್ಮಕ ಪರೀಕ್ಷೆಗೆ ಅರ್ಜಿ ಸಲ್ಲಿಸಲು ಮುಂದೆ ತೊಂದರೆ ಆಗಬಹುದು. ದಯವಿಟ್ಟು ಸಂಬಂಧಪಟ್ಟ ಅಧಿಕಾರಿಗಳು ಎಲ್ಲಾ ವಿಭಾಗಕ್ಕೂ ಹಾಗೂ ವಿದ್ಯಾರ್ಥಿಗಳು ಪಡೆದ ಅಂಕಗಳನ್ನು ಗ್ರೇಡನ ಜೊತೆಗೆ ಪ್ರಕಟಿಸಿ ಇದರ ಮಾಹಿತ

ಪುಸ್ತಕ ವಿಮರ್ಶೆ



# ಆದರ್ಶ ಪತ್ರಿಕೆಗಳಿಗೆ ಕಿವಿಮಾತು 'ವೃತ್ತಪತ್ರಿಕೆ'

| | |
|---|---|
| ಪುಸ್ತಕ | : ವೃತ್ತಪತ್ರಿಕೆ |
| ಲೇಖಕರು | : ಡಾ॥ ಡಿ.ವಿ.ಗುಂಡಪ್ಪ |
| ವರ್ಷ | : ೧೯೮೬ |
| ಪುಟ | : ೨೩೮ |
| ಬೆಲೆ | : ೧೫ ರೂ |
| ಪ್ರಕಾಶಕರು | : ಕಾವ್ಯಾಲಯ |



ಕನ್ನಡ ಸಾಹಿತ್ಯದ ಆಧುನಿಕ ಕವಿಯಾಗಿ, ಪತ್ರಿಕಾ ಕ್ಷೇತ್ರದಲ್ಲಿ ಮಹತ್ತರ ಸಾಧನೆ ಮಾಡಿದ ಡಿ.ವಿ.ಜಿ. ಎಂದೇ ಖ್ಯಾತರಾದ ಗುಂಡಪ್ಪನವರು ಸಂಸ್ಕೃತ, ಇಂಗ್ಲೀಷ್, ಕನ್ನಡ ಭಾಷೆಗಳಲ್ಲಿ ಅಸಾಧಾರಣ ಪಾಂಡಿತ್ಯವನ್ನು ಪಡೆದಿದ್ದರಲ್ಲದೆ, ತೆಲುಗು, ತಮಿಳು ಬಾಷೆಗಳ ಜ್ಞಾನವನ್ನು ಬೆಳೆಸಿಕೊಂಡು ನಾಡಿನ ಹೆಮ್ಮೆಯ ಬರಹಾಸಕ್ತರಾಗಿ ಹೆಸರುವಾಸಿಯಾಗಿದ್ದಾರೆ.

೧೯೨೮ರಲ್ಲಿ ಬಾಗಲಕೋಟೆಯಲ್ಲಿ ನಡೆದಂತ ವೃತ್ತಪತ್ರಿಕಾ ಪ್ರಥಮ ಸಮ್ಮೇಳನದ ಅಧ್ಯಕ್ಷರಾಗಿದ್ದರು. ತದನಂತರ ೧೯೬೮ ರಲ್ಲಿ ವೃತ್ತ ಪತ್ರಿಕೆ ಎಂಬ ಸಣ್ಣದಾದ ಪುಸ್ತಕ ಪ್ರಕಟಿಸಿದ್ದರು. ಈ ಪುಸ್ತಿಕೆ ಸಣ್ಣದಾದರು ಅದರೊಳಗೆ ಅನೇಕಾ ಮಾಹಿತಿಯ ವಿಷಯದ ಮಹತ್ವ ಅಡಗಿಕೊಂಡಿದೆ. ಇಂದಿನ ಯುಗದಲ್ಲಿ ಪತ್ರಿಕೆಗಳು ಗಟ್ಟಿ ಪ್ರಮಾಣದಲ್ಲಿ ದಿನೇ ದಿನೇ ಬೆಳೆಯುತ್ತಾ, ಬದಲಾಯಿಸುತ್ತಾ ಹೋಗುತ್ತಿದೆ, ಆದರೂ ಇಂದಿನ ಮಟ್ಟಿಗೆ ಈ ಗ್ರಂಥ ಒಂದು ಸಂಕ್ಷೇಪ ಕ್ರಮದಲ್ಲಿ ಸಮಗ್ರವಾಗಿದೆ.

ವೃತ್ತ ಪತ್ರಿಕೆಯು ಒಟ್ಟು ೧೫ ಅಧ್ಯಾಯಗಳಿಂದ ಕೂಡಿದ್ದಾಗಿದೆ ಮತ್ತು ೩ ಅನುಬಂದಗಳನ್ನು ಸೂಚಿಸಲಾಗಿದೆ, ವಿದ್ವಾನ್ ಭಾಷ್ಯಂ ತಿರುಮಲಾಚಾರ್ಯರು, ಭಾಷ್ಯಾಚಾರ್ಯರು, ಎಂ. ಶ್ರೀನಿವಾಸ ಯ್ಯಂಗಾರ್ಯರು, ಎಂ. ವೆಂಕಟಕೃಷ್ಣಯ್ಯ ನವರು ಹಾಗೂ ಡಬ್ಲ್ಯು.ಟಿ.ಸ್ಟೆಡ್ ರವರ ೫ ಪ್ರತಿಕೃತಿಗಳಿರುವುದನ್ನು ಇದರಲ್ಲಿ ಕಾಣಬಹುದು.

ಪತ್ರಿಕೆ ಹುಟ್ಟಿ ಬೆಳೆದ ರೀತಿ, ಕರ್ತವ್ಯ ಪ್ರಭಾವ ಇನ್ನಿತರ ವಿಚಾರಗಳ ಸಮೀಕ್ಷೆಯಿದೆ. "ಪತ್ರಿಕಾವೃತ್ತಿ ಆಗ–ಈಗ ಎಂಬ ಅಧ್ಯಾಯ ಲೇಖಕರ ಅನುಭವದ ಸಂಗತಿಗಳಿಂದ ಕೂಡಿದ್ದಾಗಿದ್ದು "ಪತ್ರಿಕೋದ್ಯೋಮಿಗಿದು ಪ್ರತಿಜ್ಞೆ", ವಿಚಾರವೇ ಪ್ರಚಾರವೇ,' ಪತ್ರಿಕೆಯ ಚತುರಂಗ ", ಕಸುಬು ತಯಾರಿ, "ಪ್ರೆಸ್ ಕಮಿಷನ್" ಪ್ರೆಸ್ ಕೌನ್ಸಿಲ್ ಹೀಗೆ ಎಲ್ಲ ರೀತಿಯ ಉಪಯುಕ್ತ ವಿಷಯಗಳನ್ನು ವಿಶದಪಡಿಸಲಾಗಿದೆ.

ಈ ಸಮಗ್ರ ವೃತ್ತ ಪತ್ರಿಕೆಯಲ್ಲಿ ವೃತ್ತ ಪತ್ರಿಕೋದ್ಯೋಗಿಗಳಿಗೆ ಅವಶ್ಯವಾಗಿ ತಿಳಿದಿರಬೇಕಾದದ್ದು ಅದರ ವೃತ್ತಿಗೆ ಸಂಬಂಧಪಟ್ಟ ಶಾಸನ ನಿಯಮಗಳ ಸ್ವರೂಪ ಇದಕ್ಕಾಗಿ ವೃತ್ತ ಪತ್ರಿಕೆಗಳಿಗೆ ಅನ್ವಯಿಸಲಾಗುವ ಕಾನೂನುಗಳ ಪಟ್ಟಿಯನ್ನು ಅನುಬಂಧ'ವಾಗಿ ಅನುಮೋದಿಸಲಾಗಿದೆ.

ಕೊನೆಯ ಅಧ್ಯಾಯವು ಲೇಖ–ಕರ ದೃಷ್ಟಿಯಲ್ಲಿ " ಆದರ್ಶ ಪತ್ರಿಕೆ" ಹೇಗಿರಬೇಕೆಂಬ ಸಲಹೆ ಸೂಚನೆಯನ್ನು ಸೂಚಿಸಲಾಗಿದೆ. ಪತ್ರಿಕಾವೃತ್ತಿ ಮತ್ತು ಸಾಹಿತ್ಯ ಎಂಬ ೩ ಅನುಬಂಧದಲ್ಲಿ ಆಗಿನ "ಕನ್ನಡ ಪ್ರಭ" ದಿನಪತ್ರಿಕೆಯ ಸಂಪಾದಕರಾಗಿದ್ದ ಶ್ರೀ ಎನ್. ಎಸ್. ಸೀತಾರಾಮ ಶಾಸ್ತ್ರಿಗಳವರು ಡಿ.ವಿ.ಜಿ ಯವರೊಡನೆ ನಡೆಸಿದ ಸಂದರ್ಶನವನ್ನು ಮುಖ್ಯಾಂಶಗಳ ಮೂಲಕ ವಿವರವಾಗಿ ವ್ಯಕ್ತಪಡಿಸಲಾಗಿದೆ, ಇದು ಗುಂಡಪ್ಪನವರಿಗೆ ವಿಶಿಷ್ಟವಾದ ವಿಚಾರವಾದ ಧ್ಯೇಯೋದ್ದೇಶದಿಂದ ಕೂಡಿದ್ದಾಗಿದೆ ಎಂಬುದನ್ನು ಸ್ಪಷ್ಟಪಡಿಸಲಾಗುತ್ತದೆ.

ಸಾಹಿತ್ಯ, ರಾಜಕೀಯ ಮತ್ತು ಸಾಮಾಜಿಕ, ಪತ್ರಿಕಾವೃತ್ತಿ ಹೀಗೆ ಹತ್ತು ಹಲವಾರು ಕ್ಷೇತ್ರಗಳಲ್ಲಿ ಸುಮಾರು ಏಳು(೭) ದಶಕಗಳ ಕಾಲ ಡಿ.ವಿ.ಜಿ ಯವರು ಮಾಡಿದ ಸೇವೆ ಮಹತ್ತರ ವಾದದ್ದು. ವೃತ್ತ ಪತ್ರಿಕೆ ಎಂಬ ಸಣ್ಣ ಪುಸ್ತಿಕೆ ವೃತ್ತಿಯವರಿಗೂ, ಸಾರ್ವಜನಕರಿಗೂ, ಇಂದಿನ ಪತ್ರಿಕೋದ್ಯಮ ವಿದ್ಯಾರ್ಥಿ ಗಳಿಗೂ ತುಂಬಾ ಉಪಯುಕ್ತವಾಗಿದ್ದು, ಹಿಂದೆ ಪತ್ರಿಕಾ ವ್ಯವಸ್ಥೆಯ ಸ್ಥಿತಿ–ಗತಿ ಹೇಗಿತ್ತು ಎಂಬುದಕ್ಕೆ ಈ ಪುಸ್ತಕ ನಿದರ್ಶನವಾಗಿದೆ ಇದನ್ನು ಸಮಗ್ರವಾಗಿ ಓದಿ ಮಾಹಿತಿಯನ್ನು ತಿಳಿದುಕೊಂಡರೆ ಉತ್ತಮ ಹಾಗೂ ತಿಳಿದುಕೊಳ್ಳುವ ಹಂಬಲವಿದ್ದರೆ ಇಂದೇ ಓದಿ......

# ಮೊಬೈಲ್‌ನ ವಿಚಿತ್ರ ಭಾಷೆಯ ಮಡಿಲಲ್ಲಿ ಯುವಜನಾಂಗ

ಆ ದಿನ ಮನಸ್ಸಿನಲ್ಲಿ ಏನೋ ಒಂದುತರಹದ ಬೇಜಾರಾಗಿ ಮನಸ್ಸು ತುಂಬ ಪ್ರಶಾಂತತೆಯನ್ನು ಬಯ ಸುತ್ತಿತು. ಹಾಗಾಗಿ ನಾನು ಅಂದು ತರಗತಿಗೆ ಬಂಕ್ ಮಾಡಿ ಅಲಿಯೇ ಹತ್ತಿರವಿದ್ದ ಬಯಲು ರಂಗ ಮಂದಿರಕ್ಕೆ ತೆರಳಿ, ಅಲ್ಲಿಯ ಒಂದು ಮರದಕೆಳಗೆ ತಣ್ಣನೆಯ ಗಾಳಿ ಯಲ್ಲಿ ಮೌನ ದಿಂದ ಕುಳಿತೆ. ಸುತ್ತ–ಮುತ್ತ ಲೆಲ್ಲ ಪ್ರಶಾಂತ ವಾಗಿತ್ತು. ಹಕ್ಕಿಗಳ ಕೀ–ಪೀ ಶಬ್ದ ಬಿಟ್ಟರೆ ಅಲ್ಲಿ ಬೇರೆ ಯಾವ ಗದ್ದಲ–ಗಲಾಟೆ ಇರಲಿಲ್ಲ, ಅಷ್ಟರಲ್ಲಿ ನನ್ನ ಜಂಗಮ ವಾಣಿಯು ಕೂಯ್–ಕೂಯ್ ಎಂದು ಶಬ್ದಮಾಡಿ ಎರಡು ಸಂದೇಶವನ್ನು ಸ್ವೀಕರಿಸಿತು. ಅದನು ನನ್ನ ಗೆಳೆಯ ಮಹದೇವ ಸ್ವಾಮಿ ಕಳುಹಿಸಿದ್ದನು.



ಆ ಸಂದೇಶದ ಒಡಲು wru ಎಂದು ಇತ್ತು ಅದನ್ನು ನೋಡಿದಾಗ ನನಗೆ ಏನೂ ಅರ್ಥವಾಗದೆ ಸುಮ್ಮನೆ ಕುಳಿತಿದ್ದೆ. ಪುನಃ ೫ನಿಮಿಷದ ನಂತರ, ಅದೇ ರೀತಿಯ ಇನ್ನೂ ಎರಡು ಸಂದೇಶಗಳನ್ನು ಕಳುಹಿಸಿದನು. ನನಗೆ ಆ ಪದದ ಅರ್ಥ ಎಷ್ಟು ಯೋಚಿಸಿದರು ಸಿಗಲೇ ಇಲ್ಲ, ನಾನು ಅದನ್ನು ಇಂಗ್ಲಿಷ್ ಲಿಪಿ ಯುಳ್ಳ ಬೇರೆ ಭಾಷೆ ಇರಬೇಕು ಎಂದು ಭಾವಿಸಿದೆ. ಅಷ್ಟರಲ್ಲಿ ಅವನು ನನ್ನ ಜಂಗಮ ವಾಣಿಗೆ ಕರೆಯನ್ನು ಮಾಡಿದ, ನಾನು ಆ ಕರೆಯನ್ನು ಸ್ವೀಕರಿಸಿದ ಕೂಡಲೆ 'ಲೊ where are you ಎಂದು ಎಷ್ಟು ಸಲ mes-sage ಮಾಡುವುದು' ಎಂದು, ಹೇಳಿದ ಆಗ ನನಗೆ ತಿಳಿಯಿತು where are you ಎನ್ನುವುದನ್ನು ಸಂದೇಶದಲ್ಲಿ wru ಎಂದು ಉಪಯೋಗಿಸುತ್ತಾರೆ ಎಂದು ತಿಳಿದೆ. ಅದನ್ನು ನೋಡಿ ನಮ್ಮಲ್ಲಿ ಮೊಬೈಲ್ ಸಂದೇಶದಲ್ಲಿ ಯಾವ ರೀತಿ ಪದಗಳನ್ನು ಪ್ರಯೋಗಿಸುತ್ತಾರೆ ಎನ್ನುವುದನ್ನು ತಿಳಿಯಲು ಕೌತುಕ ಪ್ರಾರಂಭವಾಯಿತು.

ಚಿತ್ರ–ವಿಚಿತ್ರವಾಗಿ ಅರ್ಥಗರ್ಭಿತ ವಲ್ಲದ, ಪದವನ್ನು ಬಳಸುತ್ತಾರೆ, good night ಗೆ gn ಎಂದು, good morning ಗೆ gm ಎಂದು, classಗೆ clsಎಂದು, college ಗೆ clg ಎಂದು, you ಗೆ u ಎಂದು, to ಗೆ 2 ಎಂದು, thank youಗೆ txs ಎಂದು, de-partmentಗೆ dept ಎಂದು, what ಗೆ wt ಎಂದು, fine ಗೆ 5n ಎಂದು, why ಗೆ y ಎಂದು, come ಗೆ cm ಎಂದು ಹೀಗೆ ಮುಂತಾದ ಪದಗಳನ್ನು ಬಳಸುತ್ತಾರೆ.

ಒಮ್ಮೆ ನನ್ನ ತಂಗಿಯೇ 'hi bro wt r u d n'ಎಂದು ಒಂದು ಸಂದೇಶ ವನ್ನು ಕಳುಹಿಸಿದಳು ಇದರ ಅರ್ಥ 'hi brother what are you doing now' ಎಂದು ತಿಳಿಯಲು ೧೫ದಿನ ಬೇಕಾಯಿತು. ಹೀಗೆ ಇಂದು ನಮ್ಮ ಯುವಕರು ಮೊಬೈಲ್‌ನಲ್ಲಿ ಭಾಷೆಯನ್ನು ಅರ್ಥವಾಗದ ರೀತಿಯಲ್ಲಿ, ಒಂದು ಹೊಸ ಭಾಷೆ ಎಂದು ಗೋಚರಿಸಿದಹಾಗೆ ಬಳಸುತ್ತಿದ್ದಾರೆ. ಈ ಬಗ್ಗೆ ನಾನು ಒಂದು ಚಿಕ್ಕ ಅಧ್ಯಯನ ಮಾಡಿದರು, ಇನ್ನು ಕೆಲವು ಪದಗಳ ಅರ್ಥ, ಅರ್ಥವಾಗದೆ ನಿಗೂಢವಾಗಿ ಉಳಿದಿದೆ.

# ಪ್ರೇಕ್ಷಕರ ಮನ ತಣಿಸಿದ ಬಾಂಬೆ

ಮೈಸೂರು

ಮೈಸೂರು ಮಿರಾಕಲ್ಸ್ ಅಸೋಸಿಯೇಷನ್ ವತಿಯಿಂದ ಇತ್ತೀಚೆಗೆ ಮಾನಸ ಗಂಗೋತ್ರಿ ಬಯಲು ರಂಗಮಂದಿರದಲ್ಲಿ ಏರ್ಪಡಿಸಿದ್ಧ ಬಾಂಬೆ ಗಾನಯಾನ ರಸಮಂಜರಿ ಕಾರ್ಯಕ್ರಮ ಪ್ರೇಕ್ಷಕರ ಗಮನ ಸೆಳೆಯಿತು.

ಬೃಹತ್ ಗಾತ್ರದ ಎಲ್.ಸಿ.ಡಿ.ಪರದೆ ಹಿನ್ನೆಲೆ, ಬಹು ವಿಧದ ಲೇಸರ್ ಶೋಗಳು, ಧ್ವನಿ ವರ್ಧಕಗಳನ್ನು ಅಳವಡಿಸಿಕೊಂಡು. ಮೈಸೂರು ಮಿರಾಕಲ್ಸ್ ತಂಡದ ನೃತ್ಯ ಗಾರರು ಕನ್ನಡ, ಹಿಂದಿ ಚಿತ್ರಗೀತೆಗಳಿಗೆ ಹೆಜ್ಜೆ ಇಟ್ಟ ರೀತಿಯಲ್ಲೇ ನೆರೆದಿದ್ದ ಯುವಕ–ಯುವತಿಯರು ಪ್ರೇಕ್ಷಕ ಸಾಲಿನಲ್ಲಿ ಹೆಜ್ಜೆ ಇಟ್ಟು ಸಾಥ್ ನೀಡಿದರು.

ಕಾರ್ಯಕ್ರಮಕ್ಕೆ ಮಿನುಗು ತಾರೆಗಳಾದ ಭೇಟಿ ನೀಡಿದ ದುನಿಯಾ ವಿಜಯ್, ಯಶ್ ಮುಂತಾದವರು ಹಾಜರಿದ್ದರು, ಸಾಧು ಕೋಕಿಲ ಮತ್ತು ಬುಲೆಟ್ ಪ್ರಕಾಶ್‌ರವರು ತಮ್ಮ ಕಲಾಸಿಪಾಳ್ಯದ ಹಲವು ಡೈಲಾಗ್ ಮಜಲುಗಳನ್ನು ತಿರುವಿ ಹಾಕಿ ಪ್ರೇಕ್ಷಕರನ್ನು ನಕ್ಕು ನಗಿಸಿದರು.

ಬಾಲಿವುಡ್ ಮತ್ತು ಸ್ಯಾಂಡಲ್‌ವುಡ್ ಗೀತೆಗಳು, ಕರಾಟೆ ಪ್ರದರ್ಶನ ಮತ್ತು ಮಿಮಿಕ್ರಿ ಕಾರ್ಯಕ್ರಮಗಳಿಗೆ ಶಾಸಕ ಎಸ್.ಶಂಕರಲಿಂಗೇಗೌಡರು ಚಾಲನೆ ನೀಡಿದರು. ಇದೇ ಸಂದರ್ಭದಲ್ಲಿ ಫ್ರೆಂಡ್ಸ್ ಅಸೋಸಿಯೇಷನ್ ವತಿಯಿಂದ ಅರ ವಿಂದ ಮಾಲಗತ್ತಿರವರು ಸೇರಿದಂತೆ ಹಲ ವಾರು ಗಣ್ಯ ವ್ಯಕ್ತಿಗಳಿಗೆ ಮೈಸೂರು ಪೇಟೆ ಧರಿಸಿ ಸನ್ಮಾನಿಸಲಾಯಿತು. ಇದಕ್ಕೆ ಮೈಸೂರು ಫ್ರೆಂಡ್ಸ್ ಅಸೋ

ಕೃಷ್ಣಕುಮಾರ್



ಬಯಲು ರಂಗಮಂದಿರದಲ್ಲಿ ನಡೆದ ಯುವ ದಸರಾ ಸಂಭ್ರಮದ ಸಮಾರೋಪ ಸಮಾರಂಭಕ್ಕೆ ನೃತ್ಯದ ಇತಿಶ್ರೀ.

# ಗ್ರಾಮೀಣ ಸ್ಯಾಕ್ಸೋಫೋನ್ ಕಲಾವಿದ

ಮನಸ್ಸಿನ ನಾದವನ್ನು ಸ್ಯಾ–ಕ್ಸೋ ಫೋನ್ ಮೂಲಕ ಪ್ರೇಕ್ಷಕರ ಮನಮಿಡಿಯುವಂತೆ ಹರ್ಷೊದ್ಗಾರದಲ್ಲಿ ಪ್ರೇಕ್ಷಕರಿಗೆ ಅರಿವಿಲ್ಲದಂತೆ, ಚಪ್ಪಾಳೆ ಗಿಟ್ಟಿಸುತ್ತಾ ನೋಡುಗರು ಬಾಯಿ ಮೇಲೆ ಬೆರಳಿಟ್ಟು ಕೊಳ್ಳುವಂತೆ, ನುಡಿಸುವ ಈ ನಮ್ಮ ಹುಡುಗನೇ ಹರೀಶ್ ಪಾಂಡವಾ.

ಈತ ಮೂಲತಃ ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಹಾರೋಹಳ್ಳಿ ಗ್ರಾಮದ ಶ್ರೀ ತವಿಲ್ ವಿದ್ವಾನ್ ತೋಪಯ್ಯ ಹಾಗೂ ಶ್ರೀಮತಿ ಅಲಮೇಲಮ್ಮ ಎಂಬ ದಂಪತಿಗೆ ಜೇಷ್ಠ ಪುತ್ರನಾಗಿ ಜನಿಸಿದ ಈತ ತನ್ನ ಚಿಕ್ಕಪ್ಪನಿಂದಲೇ ಸ್ಯಾಕ್ಸೋಫೋನ್ ನುಡಿಸುವುದನ್ನು ಕಲಿತು ಅನೇಕ ಗುರುಗಳಲ್ಲಿ, ಹೆಚ್ಚಿನ ವಿದ್ಯಾಭ್ಯಾಸ ಪಡೆದು ಸ್ಯಾಕ್ಸೋಫೋನ್‌ನ್ನು ರಾಷ್ಟ್ರದ ನಾನಾ ಭಾಗಗಳಲ್ಲಿ ನುಡಿಸುವ ಮೂಲಕ ಜನಮೆಚ್ಚುಗೆ ಪಡೆದು ಅನೇಕ ಪ್ರಶಸ್ತಿಗಳನ್ನು ಗಳಿಸಿಕೊಂಡಿದ್ದಾರೆ.

ಪ್ರೌಢಶಾಲೆಯಿಂದಲೇ ಪ್ರಶಸ್ತಿಗಳು ಇವರನ್ನು ಹುಡುಕುತ್ತಲೆ ಬರ ಲಾರಂಭಿಸಿದ್ದವು. ಜ್ಞಾನಬುತ್ತಿ, ಸಾರ್ವ ಜನಿಕ ಇಲಾಖೆ ಹಾಗೂ ದಸರಾ ವಸ್ತುಪ್ರದರ್ಶನ ಪ್ರಾಧಿಕಾರಗಳ ವತಿಯಿಂದ 'ಕಲಾಸೌರಭ' ಪ್ರಶಸ್ತಿ ಪಡೆದರು, ಪದವಿ ವ್ಯಾಸಂಗದ ಅವಧಿಯಲ್ಲಿ ಮೈಸೂರು ವಿಶ್ವವಿದ್ಯಾ ನಿಲಯದ ಅಂತರ ಕಾಲೇಜ್ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಡಿ. ಬನುಮಯ್ಯ ಕಾಲೇಜನ್ನು ಪ್ರತಿನಿಧಿಸಿ ಪ್ರಥಮ ಸ್ಥಾನ ಪಡೆದರು. ಅದೇ ಸಂದರ್ಭದಲ್ಲಿ ದಕ್ಷಿಣವಲಯ 'ಯುವಜನೋತ್ಸವ' ಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಆಯ್ಕೆ ಯಾಗಿ ಆಂಧ್ರ ಪ್ರದೇಶದ ತಿರುಪತಿಯ ಪದ್ಮಾವತಿ ವಿಶ್ವ ವಿದ್ಯಾನಿಲಯದಲ್ಲಿ ನಡೆದ ಯುವ ಜನೋತ್ಸವದಲ್ಲಿ ವಾದ್ಯ ಸಂಗೀತ ವಿಭಾಗದಲ್ಲಿ ಮೂರನೇ ಸ್ಥಾನ ಗಳಿಸಿದ ರು. ಜಾನಪದ ವಾದ್ಯಗೋಷ್ಟಿ ವೃಂದದಲ್ಲಿ ಭಾಗವಹಿಸಿ ಪ್ರಥಮ ಸ್ಥಾನ ಪಡೆದು, ರಾಷ್ಟ್ರಮಟ್ಟಕ್ಕೆ ಆಯ್ಕೆಯಾದರು.

ಪದವಿಯ ಅವಧಿಯಲ್ಲಿ ಸತತ ಮೂರು ಬಾರಿ ಮೈಸೂರು ವಿಶ್ವ ವಿದ್ಯಾನಿಲಯ ದಿಂದ ಕೇರಳದ ಕ್ಯಾಲಿಕಟ್ ಹಾಗೂ ಪಶ್ಚಿಮ ಬಂಗಾಳದ ವಿದ್ಯಾ ಸಾಗರ್ ವಿಶ್ವವಿ



ದ್ಯಾಲಯ ಗಳಲ್ಲಿ ನಡೆದ ಯುವ ಜನೋ ತ್ಸವದಲ್ಲಿ ವಾದ್ಯ ಗೋಷ್ಠಿ , ಸಂಗೀತ, ಮೂಕಾ ಭಿನಯ, ಜಾನ ಪದ ವಾದ್ಯಗೋಷ್ಠಿ, ಪಾಶ್ಚಿಮಾತ್ಯ ಸಂಗೀತ ವೃಂದ ಗಾನದಲ್ಲಿ ಸ್ಪರ್ಧಿಸಿ ಬಹುಮಾನ ಪಡೆದರು.

ಇಷ್ಟೇ ಅಲ್ಲದೆ ಬನುಮಯ್ಯ ಕಾಲೇ ಜಿನ ಸಾಂಸ್ಕೃತಿಕ ಪ್ರತಿಭೆ ಪ್ರಶಸ್ತಿ, ಕನ್ನಡ ಮತ್ತು ಸಾಂಸ್ಕೃತಿಕ ಇಲಾಖೆಯ ಯುವ ಪ್ರತಿಭಾ ಪುರಸ್ಕಾರ, ಗ್ರಾಮರಂಗ ಸಾಂಸ್ಕೃತಿಕ ವೇದಿಕೆಯ ವತಿಯಿಂದ 'ಗ್ರಾಮೀಣ ಯುವ ಕಲಾವಿದ' ಪುರಸ್ಕಾರ, ಮಂಡ್ಯ ಜಿಲ್ಲಾ 'ಕನ್ನಡ ರಾಜ್ಯೋತ್ಸವ' ಪ್ರಶಸ್ತಿ, ಹಾಗೂ ಹಲವಾರು ಸಂಘ ಸಂಸ್ಥೆಗಳಿಂದ ಪ್ರಶಸ್ತಿ, ಪುರಸ್ಕಾರ, ಗೌರವ ಸನ್ಮಾನಗಳಿಗೆ ಭಾಜನರಾಗಿದ್ದಾರೆ.

ಇವರು ಹಲವಾರು ಕಡೆ ತಮ್ಮ ಸ್ಯಾಕ್ಸೋಫೋನ್ ಕಛೇರಿಯನ್ನು ಕರ್ನಾಟಕ ಅಲ್ಲದೆ ನೆರೆಯ ರಾಜ್ಯ ಗಳಾದ ತಮಿಳುನಾಡು, ಕೇರಳ, ಆಂಧ್ರಪ್ರದೇಶ, ಮಹಾರಾಷ್ಟ್ರ, ಹಾಗೂ ಒಡಿಸ್ಸಾ ಸೇರಿದಂತೆ ಮುಂತಾದ ರಾಜ್ಯಗಳಲ್ಲಿ ಸಂಗೀತ ಕಾರ್ಯಕ್ರಮಗಳನ್ನು ನೀಡಿದ್ದಾರೆ.

ಪ್ರಸ್ತುತ ಇವರು ಮೈಸೂರು ವಿಶ್ವ ವಿದ್ಯಾಲಯದ ಮಾನಸ ಗಂಗೋತ್ರಿಯ ಅರ್ಥಶಾಸ್ತ್ರ ವಿಭಾಗ 'ದಲ್ಲಿ ಸ್ನಾತಕೋತ್ತರ ಪದವಿಯನ್ನು ಓದುತ್ತಿದ್ದಾರೆ. ಇವರು ತಮ್ಮ ಸ್ಯಾಕ್ಸೋಫೋನ್ ವಾದನದಲ್ಲಿ ವಿವಿಧ ರೀತಿಯ ಪ್ರಯೋಗ ಗಳನ್ನು ಮಾಡುತ್ತಾ ಬಂದಿರುತ್ತಾರೆ, ಸ್ಯಾಕ್ಸೋಫೋನ್ 'ಫ್ಯೂಜನ್', ಸ್ಯಾಕ್ಸೋಫೋನ್' ಜುಗಲ್‌ಬಂದಿ', ಹೀಗೆ ಮುಂತಾದ ಹೊಸ ಪ್ರಯತ್ನ

# ವಿ.ವಿ. ಅಂತರ ಕಾಲೇಜು ಕ್ರೀಡಾಕೂಟಕ್ಕೆ ತೆರೆ



**ಸಮಾರೋಪ ಸಮಾರಂಭದ ಮುಖ್ಯ ಅತಿಥಿಗಳಾಗಿ ಆಗಮಿಸಿ ಮಾತನಾಡಿದ ಬಿ.ಹೆಚ್.ಸುರೇಶ್. ಚಿತ್ರದಲ್ಲಿ ಡಾ॥ಸಿ.ಕೃಷ್ಣ ಮತ್ತು ಕೆ.ಬಿ. ಬಾಲಕೃಷ್ಣ ಇದ್ದಾರೆ.**

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಸ್ಪರ್ಧೆ, ಸೆಪ್ಟೆಂಬರ್ ೧೭ರಂದು ತೆರೆಕಂಡಿದೆ.

ವಿ.ವಿ.ಯ ಕ್ರೀಡಾ ವಿಭಾಗದ ಜಿಮ್ನಾಸಿಯಮ್ ಹಾಲ್‌ನಲ್ಲಿ ನಡೆದ ಸಮಾರೋಪ ಸಮಾರಂಭದಲ್ಲಿ ಜಿಮ್ನಾಸ್ಟಿಕ್ಸ್, ಈಜು, ಯೋಗಾಸನ, ಕುಸ್ತಿ,ಭಾರ ಎತ್ತುವ ಹಾಗೂ ಅತ್ಯುತ್ತಮ ದೇಹದಾರ್ಢ್ಯ ಸ್ಪರ್ಧೆಗಳ ವಿಜೇತರಿಗೆ ಬಹುಮಾನ ವಿತರಿಸಿದರು. ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ಪೋಲಿಸ್ ಅಕಾಡೆಮಿಯ ಉಪನಿರ್ದೇಶಕರಾದ ಕೆ.ಬಿ.ಬಾಲಕೃಷ್ಣರವರು ಕಾಲೇಜು ಹಂತಕ್ಕೆ ಬಂದ ನಂತರ ಕೆಲವರು ಕ್ರೀಡೆಗಳಲ್ಲಿ ಪಾಲ್ಗೋಳ್ಳುವುದಿಲ್ಲ ಇದು ಸರಿಯಲ್ಲ, ಕ್ರೀಡೆಗಳಿಂದ ಇಂದು ಆರೋಗ್ಯವಷ್ಟೇ ಅಲ್ಲದೆ ಭವಿಷ್ಯವು ಉತ್ತಮವಾಗಿರುತ್ತದೆ. ಕ್ರೀಡೆಗಳಲ್ಲಿ ಯಾವುದೇ ಅಡೆತಡೆಗಳಿಲ್ಲದೆ ಭಾಗವಹಿಸಿ ಎಂದು ವಿದ್ಯಾರ್ಥಿಗಳಿಗೆ ಕರೆನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಮೈಸೂರು ವಿ.ವಿ.ಯ ಹಣಕಾಸು ಅಧಿಕಾರಿಗಳಾದ ಬಿ.ಹೆಚ್.ಸುರೇಶ್ ಮಾತನಾಡಿ. ಅಂದಿಗಿಂತ ಇಂದು ಕ್ರೀಡೆಗೆ ಉತ್ತಮ ಪ್ರೋತ್ಸಾಹ ದೊರೆಯುತ್ತಿದೆ, ಕ್ರೀಡೆ ಜೀವನದಲ್ಲಿ ಶಿಸ್ತನ್ನು ಕಲಿಸುವು ದಲ್ಲದೆ ಮಾನಸಿಕ ಒತ್ತಡವನ್ನು ಕಡಿಮೆ ಮಾಡುತ್ತದೆ. ಉದ್ಯೋಗದಲ್ಲಿ ಕ್ರೀಡಾ ಪಟುಗಳಿಗೆ ಖೋಟಾ ನೀಡಿದರೆ ಉತ್ತಮ ಎಂದು ಅಭಿಪ್ರಾಯಪಟ್ಟರು. ವಿದ್ಯಾರ್ಥಿ ಗಳಾದ ನೀವು ಕ್ರೀಡಾ ಮನೋಭಾವ ಬೆಳೆಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾರ್ಯುಕ್ರಮದಲ್ಲಿ ಮೈಸೂರು ವಿ.ವಿ.ಯ ಕ್ರೀಡಾ ವಿಭಾಗದ ಮುಖ್ಯಸ್ಥರಾದ ಡಾ॥ಸಿ.ಕೃಷ್ಣ ಉಪಸ್ಥಿತರಿದ್ದರು.

**ಅವಿನಾಶ ಜೈನಹಳ್ಳಿ**

# ಮಿಸ್ಟರ್ ಮೈಸೂರು ವಿಶ್ವವಿದ್ಯಾನಿಲಯ ಮತ್ತೊಮ್ಮೆ ಶ್ಯಾಮ್



**ಆಕರ್ಷಕ ಮೈಕಟ್ಟಿನ ಒಂದು ಭಂಗಿ. ಚಿತ್ರದಲ್ಲಿ ಡಾ॥ಸಿ.ಕೃಷ್ಣ, ಬಿ.ಹಚ್.ಸುರೇಶ್, ಕೆ.ಬಿ.ಬಾಲಕೃಷ್ಣ**

ಮೈಸೂರು

ಸೆಗಲ, ಉಕ್ಕಿನ ದೇಹ; ಭೀಮಾನಂತಹ ಆಕರ್ಷಕ ಮೈಕಟ್ಟನ್ನು ಪ್ರದರ್ಶಿಸಿದ ಬಿ.ಸೋಮನಿ ಕಾಲೇಜಿನ ಶ್ಯಾಮಸುಂದರ್ ಮೈಸೂರು ವಿಶ್ವವಿದ್ಯಾನಿಲಯದ ಅಂತರ ಕಾಲೇಜು ದೇಹ ದಾರ್ಢ್ಯಸ್ಪರ್ಧೆಯಲ್ಲಿ ಮಿಸ್ಟರ್ ಮೈಸೂರು ವಿಶ್ವವಿದ್ಯಾನಿಲಯ ಪ್ರಶಸ್ತಿ ಪಡೆಯುವ ಮೂಲಕ ಹ್ಯಾಟ್ರಿಕ್ ಸಾಧನೆ ಮಾಡಿದರೆ.

ಮೈಸೂರು ವಿ,ವಿ,ಯಲ್ಲಿ ನಡೆದ ಜಿಮ್ನಾಷಿಯಂ ಹಾಲ್‌ನಲ್ಲಿ ಮಿಸ್ಟರ್ ಮೈಸೂರು, ವಿ.ವಿ ಪ್ರಶಸ್ತಿಗಾಗಿ ಏಳು ಸ್ಪರ್ಧಿಗಳ ನಡುವೆ ನಡೆದ ದೊಡ್ಡ ಪೈಪೋಟಿಯಲ್ಲಿ ೬೦ ಕೆ ಜಿ. ವಿಭಾಗದ ಚಾಂಪಿಯನ್ ಶ್ಯಾಮ್‌ಸುಂದರ್ ತಮ್ಮ ದೃಢಕಾಯ ಶಾರೀರಿಕ ರಚನೆ ಮತ್ತು ತೋಳಿನ ಸ್ನಾಯುಗಳು ವಿಶಾಲವಾದ ಎದೆಯ ಭಾಗ, ಹೀಗೆ ಪ್ರತಿಯೊಂದು ಕೋನಗಳಿಂದಲೂ ಪ್ರೇಕ್ಷಕರ ಹಾಗೂ ನಿರ್ಣಾಯಕರ ಮನ ಮುಟ್ಟುವಲ್ಲಿ ಯಶಸ್ವಿ ಪಾತ್ರ ವಹಿಸಿದ್ದರು, ಜೊತೆಗೆ ಪ್ರದರ್ಶನದಲ್ಲೂ ನಿಖರತೆ ಸತತ ಮೂರನೇ ಬಾರಿ ಪ್ರಶಸ್ತಿಯನ್ನು ತಮ್ಮದಾಗಿಸಿಕೊಂಡಿದ್ದಾರೆ.

**ಅವಿನಾಶ ಜೈನಹಳ್ಳಿ**

# ಗ್ರಾಮೀಣ ಸೊಗಡಿನ ಕನ್ನಡಿ ಹಿಡಿದ ಗರಡಿ

ಅಂದು ಮಣ್ಣಲ್ಲಿ, ಇಂದು ಬೆಡ್ಡಲ್ಲಿ, ಅದು ನೆನಪಿನಲ್ಲಿ ಅಳಸಿಹೋಗದಂತಹ ಕಲೆ, ಅದರಲ್ಲಿ ಬೆರೆತವರು ಇಂದಿಗೊ ನೆನಪು ಮಾತ್ರ, ಹಳ್ಳಿಗಳಲ್ಲಿ, ನಗರ ಪ್ರದೇಶಗಳಲ್ಲಿ, ತನ್ನದೇ ಆದ ಛಾಪವನ್ನು ಮೂಢಿಸಿದಂತ ಗಂಡೆದೆ ಕಲೆಯೇ 'ಗರಡಿ'ಮನೆಯ ಕುಸ್ತಿ.

'ಗರಡಿ' ಎಂದಾಕ್ಷಣಾ ಈ ಪದದಲ್ಲಿ ಯಾವುದೋ ಒಂದು ಭಯದ ವಾತಾವರಣ ಕಂಡು ಬರುತ್ತದೆ. ಇದು ಸುಮಾರು ೨೦೦ ವರ್ಷಗಳ ಇತಿಹಾಸವನ್ನು ಹೊಂದಿದ್ದು. ಇದನ್ನು ಪರಿಚಯಿಸಿದವರು ರಾಜ ಮಹಾರಾಜರುಗಳು, ಅಂದಿನ ಕಾಲದಲ್ಲಿ, ಅರಮನೆಯ ಮುಂದೆ ಗರಡಿಮನೆಯನ್ನು ಕಟ್ಟಿಸಿ, ಅದನ್ನು ಪ್ರಾರಂಭಿಸಿದ ಕೀರ್ತಿ ಮೈಸೂರಿನ ರಾಜಮನೆತನಕ್ಕೆ ಸಲ್ಲುತ್ತದೆ. ನಾಡ ಹಬ್ಬವಾದ ದಸರಾದ ಸಂದರ್ಭದಲ್ಲಿ ರಾಷ್ಟ್ರ ಮಟ್ಟದ ಎಲ್ಲಾ 'ಪೈಲ್ವಾನ್' ಗಳನ್ನು ನಿಲ್ಲಿಸಿ ಕುಸ್ತಿ ಅಡಿಸುತ್ತಿದುದ್ದು, ದಸರಾದ ಮತ್ತೊಂದು ವಿಶೇಷವಾಗಿದೆ.



**ಗರಡಿ ಮನೆಯ ಒಳಾಂಗಣದ ಒಂದು ಸ್ಥೂಲ ನೋಟ**

ಗರಡಿ ಮನೆ ಎಂಬುವುದು ಸಾಮಾನ್ಯವಾದ ಸ್ಥಳವಾಗಿರಲಿಲ್ಲ, ಅದು ದೇವಸ್ಥಾನ ವಾಗಿತ್ತು. ಇದರ ಒಳಗಡೆ ಹೋಗಬೇಕಾದರೆ ಸ್ನಾನ ಮಾಡದೆ ಹೋಗುತ್ತಿರಲಿಲ್ಲಿ, ಮಡಿ ಮೈಲಿಗೆಯನ್ನು ಅನುಸರಿಸುತ್ತಿದ್ದರು, ಒಳಗೆ ಹೋಗಬೇಕಾದರೆ ಚಪ್ಪಲಿ ಹಾಕುತ್ತಿರಲಿಲ್ಲ, ಅಂದಿನ ಕಾಲದಲ್ಲಿ ಪ್ರತಿ ಮನೆಯಲ್ಲೂ ಒಬ್ಬೊಬ ಪೈಲ್ವಾನ್ ಗಳಿದ್ದರು. ಪ್ರತಿದಿನ ಬೆಳಗೆ ಹಾಗೂ ಮುಸ್ಸಂಜೆ ಹೊತ್ತಿಗೆ ಅಲ್ಲಿಗೆ ಪೂಜೆಯನ್ನು ಮಾಡಿ ತಮ್ಮ ಸಂಪ್ರಾ ದಾಯಗಳನ್ನು ಪಾಲಿಸುತ್ತಿದ್ದರು, ಮಹಿಳೆಯರಿಗೆ ಒಳಗಡೆ ಪ್ರವೇಶ ವಿರಲಿಲ್ಲ, ಮೈಸೂರಿನಲ್ಲಿ ಸುಮಾರು ಒಟ್ಟು ೫೦ ರಿಂದ ೬೦ ಗರಡಿ ಮನೆಗಳಿದ್ದವು. ಅವುಗಳು ಇಂದಿಗೆ ತಮ್ಮ ಮಾನ್ಯತೆಯನ್ನು ಕಳೆದುಕೂಂಡು ಬರುತ್ತಿವೆ. ಅಂದಿನ ಕಾಲದಲ್ಲಿದ್ದ ಸಂಪ್ರದಾಯಗಳನ್ನು ಕೆಲವರು ಇಂದಿಗೂ ಪಾಲಿಸಿಕೊಂಡು ಬರುತ್ತಿದ್ದಾರೆ. ಅಂದಿನ ಕಾಲದಲ್ಲಿ ಗರಡಿಯಲ್ಲಿ ಪಳಗುತ್ತಿದ್ದವರು ಕೂಲಿ ಕಾರ್ಮಿಕರು, ಕೃಷಿಕರುಗಳೇ ಆಗಿದ್ದರು. ಅದರೆ ಅದು ಅಂದಿನ ಅವಧಿಯಲ್ಲಿಯೇ ಮುಗಿದು ಹೋಗಿದೆ ಎಂಬ ಸಂಗತಿ ಈಗ ಉದ್ಭವ ವಾಗಿ ಶೋಚನೀಯವಾಗಿದೆ.

ದೇವಸ್ಥಾನಕ್ಕೆ ಭಕ್ತರೇ ಬರದೇ ಹೋದರೆ, ದೇವರಗಾಲಿ, ದೇವಸ್ಥಾನವಾಗಲಿ ಏನು ಮಾಡಲು ಸಾಧ್ಯ ಎನ್ನುವಂತಾಗಿದೆ ಇದರ ಪರಿಸ್ಥಿತಿ, ಇಲ್ಲಿಗೆ ಯುವಕರು ಬೇಕು ಅದರೆ ಅವರ ಪಾತ್ರ ಇಲ್ಲಿಲ್ಲ ಯಾಕೆಂದರೆ ರೀತಿ ಇತ್ತೀಚಿನ ದಿನಗಳಲ್ಲಿ ಗರಡಿ ಬದಲು 'ಜಿಮ್' ಗಳಿಗೆ ಹೋಗುವರ ಸಂಖ್ಯೆ ಅಧಿಕ ವಾಗಿದ್ದು, ದೇವಸ್ಥಾನಕ್ಕೆ ಬರುವವರ ಸಂಖ್ಯೆ ವಿರಳವಾಗಿದೆ. ಮೈಸೂರಿನ ಮೂಲೆ ಮೂಲೆಗಳಲ್ಲಿಯೂ ಗರಡಿಮನೆಗಳಿದ್ದವು, ಅದರೇ ಈಗ ಮೂಲೆ ಮೂಲೆಯಲ್ಲಿ ಜಿಮ್‌ಗಳು ಹೆಚ್ಚಾಗಿವೆ. ಇದರ ಪರಿಸ್ಥಿತಿ ಹೇಗಿದೆ, ಅಂದರೆ 'ಹಳ್ಳಿ ಹುಡುಗರು ಜಿಮ್ಗೆ ಬಂದ್ರು' ಅನ್ನೊ ರೀತಿ ಇದೆ. ರಾಜ ಮಹಾರಾಜರ ಕಾಲದಲ್ಲಿ ಬೆಳೆದಂತ ಗರಡಿಯಲ್ಲಿ ರಾಜ್ಯ, ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವಂತೆ ಮೈಸೂರಿನ ಹೆಸರಾಂತ ಪೈಲ್ವಾನ್‌ಗಳಾದ ಪೈ.ಬಸವಯ್ಯ, ಪೈ. ಚಿಕ್ಕಬಸವಯ್ಯ,

ಪೈ.ಹುಚ್ಚಪ್ಪ, ಇನ್ನು ಮುಂತಾದವರು ಮೈಸೂರು ನಗರಕ್ಕೆ ಕೀರ್ತಿ ತಂದು ಕೊಟ್ಟವರು, ಅದರೆ ಅವರು ಬಂದ ಗರಡಿಗಳು ಇಂದಿಗೆ ಸೋರುತ್ತ ಹೋಗುತ್ತಿರುವುದು ವಿಪರ್ಯಾಸ ಅಲ್ವಾ.

ರಾಜಮಹಾರಾಜರು ನಡೆಸಿಕೊಂಡು ಬಂದ ಈ ಕಲೆ ಕಣ್ಮರೆಯಾಗುತ್ತಿರುವುದು ಬೇಸರವಾಗುತ್ತಿದೆ, ಕುಸ್ತಿಗಿಂತಲೂ ಪ್ರಾಮುಖ್ಯತೆಯನ್ನು ಪಡೆದಂತ ಕಲೆ, ಈ ಕಲೆಯಿಂದ ಆರೋಗ್ಯಕ್ಕೂ ತೆಊಂದರೆ ಯಾಗುತ್ತಿರಲ್ಲಿಲ್ಲ. ಜಿಮ್‌ನಿಂದ ದೇಹದ ಸ್ಥಿತಿಯನ್ನು ಸುಧಾರಿಸಬಹುದು ಹೊರತು ಆರೋಗ್ಯವನ್ನು ಸುಧಾರಿಸಲು ಸಾಧ್ಯವಾಗುವುದಿಲ್ಲ.

ತಾತಾ ಮುತ್ತಾತಾನ ಕಾಲದಿಂದಲು ಹೆಸರು ಮಾಡಿದ್ದವರು ಕೆ.ಜಿ.ಕೊಪ್ಪಲಿನ ಪೈಲ್ವಾನ್ ಬಸವಯ್ಯನವರು, ಇವರು ಹಲವಾರು ರಾಷ್ಟ್ರ ಹಾಗೂ ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ಪಡೆದುಕೊಂಡವರು, ಮಹಾರಾಜರ ಕಾಲದಲ್ಲಿಂಯೇ ಹತ್ತು ಜನಗಳ ಗರಡಿ ಮನೆಯನ್ನು ೧೯೫೨ರಲ್ಲಿ ಸ್ಥಾಪಿಸಿದರು, ಇಂದಿಗೂ ಸಹ ತನ್ನ ಕಾರ್ಯ ಚಟುವಟಿಕೆಗಳನ್ನು ನಡೆಸಿ ಕೊಂಡು ಬರುತ್ತಿರುವುದೇ ದೊಡ್ಡ ಬಸವಯ್ಯನವರ ಹತ್ತು ಜನಗಳ ಗರಡಿ. ಈ ಕಲೆ ಇಂದಿಗೆ ಬೆಲೆಯನ್ನು ಕಳೆದು ಕೊಂಡಿರುವುದು ಜಿಮ್‌ನ ಪ್ರಸ್ತುತತೆಯಿಂದ, ಅಂದು ಮಣ್ಣಾಲ್ಲಿ ಗುದ್ದಾಟ, ಇಂದು ಬೆಡ್ಡಿನ ಮೇಲೆ ಬಿದ್ದಾಟ, ಆದ್ದರಿಂದ ಯಾರು ಮಣ್ಣಿಗೆ ಬೆಲೆ ಕೊಡುತ್ತಿಲ್ಲ, ಎಲ್ಲ ಬೆಡ್ಡಿನ ಮೇಲೆ ಬೀಳುವಂತರಾಗುತ್ತಿದಾರೆ. ಹಾಗೂ ರಾಜಮಹಾರಾಜರ ಕಾಲದ ಗತವೈಭವವನ್ನು ಸಾರುತ್ತ ನಡೆಸಿಕೊಂಡು ಬಂದ ಗರಡಿ, ತನ್ನದೆಯಾದ ಸಂಘ ಸಂಸ್ಥೆ ಗಳನ್ನು ಮಾಡಿಕೊಂಡು ಈ ಸಂಸ್ಥೆಗಳಿಂದಲೇ ಗರಡಿ ಮುಂದೆ ಬರುತ್ತಿದೆ.

ಅಂತಹ ಕಾಲದಲ್ಲಿಯೇ, ನಾಡಿಗೆ ಹೆಮ್ಮೆ ತರುವಂತ ಕಲೆ, ಆ ಕಲೆ ಮೆರೆದಿರುವುದು ಎಲ್ಲೋ ಬಣ್ಣಿಸಲು ಸಾಧ್ಯವಿಲ್ಲ, ಈ ಕಲೆಯನ್ನು ಇಷ್ಟರ ಮಟ್ಟಿಗೆ ಮರೆಯಾಗುತ್ತಿರುವುದು ಎಂತಹ ವಿಪರ್ಯಾಸವಾಗಿದೆ ಎಂದರೆ ಅದು

# ಈಜು ಸ್ಪರ್ಧೆ: ಅವಿಗೆ 3ಬೆಳ್ಳಿ, 9 ಕಂಚು

ಮೈಸೂರು:

ಸೆ.೨೦ ರಂದು ನಡೆದ ಸ್ಪರ್ಧೆಯಲ್ಲಿ ನೀರಿನಲ್ಲಿ ಮೀನಿನಂತೆ ತೇಲುವ ಕೌಶಲ್ಯ ಮೆರೆದ ಮಾನಸ ಗಂಗೋತ್ರಿ ಸಂವಹನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗದ ಜೆ.ಕೆ. ಅವಿನಾಶ್ ರವರು ಇತ್ತೀಚೆಗೆ ನಡೆದ ಮೈಸೂರು ವಿಶ್ವ ವಿದ್ಯಾಲಯ ಅಂತರ ಕಾಲೇಜ್ ಈಜು ಸ್ಪರ್ಧೆಯಲ್ಲಿ ೯ ಕಂಚು. ೩ ಬೆಳ್ಳಿ ಪದಕ ಗೆದ್ದು ಸಾಧನೆ ಪ್ರದರ್ಶಿಸಿದ್ದಾರೆ.



ಮೈಸೂರಿನ ಸರಸ್ವತಿ ಪುರಂನಲ್ಲಿರುವ ವಿಶ್ವವಿದ್ಯಾನಿಲಯದ ಈಜುಕೊಳದಲ್ಲಿ ೧೫೦೦ ಮೀಟರ್ ಫ್ರೀ ಸ್ಟೈಲ್, ೨೦೦ಮೀಟರ್ ಬಟರ್ ಫ್ಲೇಸ್ಟ್ರೋಕ್ ಹಾಗೂ ೨೦೦ ಮೀಟರ್ ಬ್ಯಾಕ್ ಸ್ಟ್ರೋಕ್‌ಲ್ಲಿ ಬೆಳ್ಳಿ ಪದಕವನ್ನು ಕೊರಳಿಗಿರಿಸಿ ಕೊಂಡಿದ್ದಾರೆ.

ಹಾಗೆಯೇ ೫೦, ೧೦೦, ೨೦೦, ೪೦೦ ಮೀಟರ್ ಫ್ರೀ ಸ್ಟೈಲ್, ೫೦, ೧೦೦ ಮತ್ತು ೨೦೦ ಮೀಟರ್ ಬ್ರೆಸ್ಟ್ ಸ್ಟ್ರೋಕ್, ೫೦ ಮೀಟರ್ ಬ್ಯಾಕ್ ಸ್ಟ್ರೋಕ್ ಹಾಗೂ ೪೦೦ ಮೀಟರ್ ವೈಯುಕ್ತಿಕ ಮಿಡ್ಲೆ ಸ್ಪರ್ಧೆಯಲ್ಲಿ ೯ ಕಂಚು ಹಾಗೂ ೩ ಬೆಳ್ಳಿ ಪದಕ ಗಳಿಂದ ೧೮ ಅಂಕ ಗಳನ್ನು ಪಡೆದು ಕೆಲವೇ ಅಂತರ ಗಳಿಂದ ಅಂಕಪಟ್ಟಿಯಲ್ಲಿ ೨ನೇ ಸ್ಥಾನದಿಂದ ವಂಚಿತರಾಗಿ ೩ನೇ ಸ್ಥಾನಕ್ಕೆ ತೃಪ್ತಿ ಪಟ್ಟು ಕೊಂಡರು. ವಿಭಾಗದ ಅಧ್ಯಾಪಕ ವರ್ಗ, ಅಧ್ಯಾಪಕೇತರ ವರ್ಗ ಮತ್ತು ವಿದ್ಯಾರ್ಥಿ-ವಿದ್ಯಾರ್ಥಿನಿ ಮಿತ್ರರೆಲ್ಲರೂ ಅವಿನಾಶ್‌ಗೆ ಅಭಿನಂದನೆ ಸಲ್ಲಿಸಿದರು.

# ಮೈಸೂರು ವಿ.ವಿ ಸಂಶೋಧಕರ ಸಂಘದ ಉದ್ಘಾಟನೆ



**ಮಾನಸ ಗಂಗೋತ್ರಿಯ ಮಾನವಿಕ ಸಭಾಂಗಣದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಶೋಧಕರ ಸಂಘವನ್ನು ಕರ್ನಾಟಕ ಲೋಕಸೇವಾ ಆಯೋಗದ ಅಧ್ಯಕ್ಷ ಗೋನಾಳ್ ಭೀಮಪ್ಪ ಉದ್ಘಾಟಿಸಿದರು. ಮೈ.ವಿ.ವಿ ಕುಲಪತಿ ಪ್ರೊ.ವಿ.ಜಿ.ತಳವಾರ್, ಸಾಮಾಜಿಕ ಮತ್ತು ಆರ್ಥಿಕ ಬದಲಾವಣೆ ಸಂಸ್ಥೆಯ ನಿರ್ದೇಶಕ ಪ್ರೊ.ಆರ್.ಎಸ್.ದೇಶಪಾಂಡೆ, ಪ್ರೊ.ಪಿ.ವೆಂಕಟರಾಮಯ್ಯ, ಸಿಂಡಿಕೇಟ್ ಸದಸ್ಯ ಶರತ್, ಪ್ರೊ.ಡಿ.ಕೆ.ಶ್ರೀನಿವಾಸ್, ಸಂಶೋಧಕರ ಸಂಘದ ಅಧ್ಯಕ್ಷ ಆರ್.ನಿಂಗರಾಜು ಮತ್ತಿತರರು ಚಿತ್ರದಲ್ಲಿದ್ದಾರೆ.**

**ಚಿತ್ರ: ಪ್ರೇಮ್ ಕುಮಾರ್**

ಸಂಪಾದಕರು ಮತ್ತು ಪ್ರಕಾಶಕರು :ಪ್ರೋ ಎನ್ ಉಷಾರಾಣಿ ಅಧ್ಯಕ್ಷರು ಸಂವಹನ ಮತ್ತು ಪತ್ರಿಕೋದ್ಯಮ ವಿಭಾಗ ಮೈಸೂರು-6. ಮುದ್ರಕರು: ಶ್ರೀ ಎಸ್. ಆನಂದ್. ನಿರ್ದೇಶಕರು ,ವಿ.ವಿ.ಮುದ್ರಣಾಲಯ ಮಾನಸಗಂಗೋತ್ರಿ, ಮೈಸೂರು-6.ಕೆ.ಸಂ1088-ಎಂ.ಯು.ಪಿ.ಪಿ-200ಪ್ರತಿಗಳು30-10-2011